
# ವೇಣುಗೋಪಾಲ ದಾಸರು




ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಾರ್ಪೊರೇಷನ್ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು – ೫೬೦ ೦೦೨.

# ವೇಣುಗೋಪಾಲದಾಸರು

ಲೇಖಕರು:

ಆರಳುಮಲ್ಲಿಗೆ ಪಾರ್ಥಸಾರಥಿ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
14 / 3, ನೃಪತುಂಗ ರಸ್ತೆ
ಬೆಂಗಳೂರು – 560 002

ಮೊದಲ ಮುದ್ರಣ : 1994

ಬೆಲೆ : 10–00 ರೂ.

ಮುದ್ರಣ :

ಶ್ರೀರಂಗ ಪ್ರಿಂಟರ್ಸ್ ಮತ್ತು ಬೈಂಡರ್ಸ್
ನಂ. 9 / 3, ಗಣೇಶ ಪಾರ್ಕ್ ಹತ್ತಿರ
ಗವಿಪುರಂ, ಬೆಂಗಳೂರು–560019

# ಅಧ್ಯಕ್ಷರ ಮಾತು

ಆಂತರಿಕವಾಗಿರುವ ಕಲಾಪ್ರಜ್ಞೆ ಪರಕೀಯವಾಗದಂತೆ ಸದಾ ನೋಡಿಕೊಳ್ಳುವ ಅನಿವಾರ್ಯತೆ ಇಂದಿನ ಸಂದರ್ಭದಲ್ಲಿ ಎದ್ದು ಕಾಣುತ್ತದೆ. ಕಲೆಯ ಹೊಲದಲ್ಲಿ ನಿರಂತರ ಕೃಷಿಗೆ ಒಂದು ರೀತಿಯ ಹಟ, ಒಳಗೊಳ್ಳುವಿಕೆ, ಹೋರಾಟ ಎಲ್ಲವೂ ಅಗತ್ಯ. ಈ ರೀತಿಯ ಕೃಷಿಗಾಗಿ ತಮ್ಮ ತನು-ಮನ-ಧನಗಳನ್ನರ್ಪಿಸಿ ವಿಶಿಷ್ಟ ಕಲಾಪ್ರಕಾರ ತಪಸ್ವಿಗಳು ಒಂದರ ಮಹತ್ವವನ್ನೂ ಕಲಾಪ್ರೇಮಿಗಳಿಗೆ ಪರಿಚಯಿಸಿ, ಪೋಷಿಸಿ, ಬೆಳೆಯಿಸಿದ ಕೆಲವು ಕಲಾತಪಸ್ವಿಗಳು ಸ್ಮರಣೀಯರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಂತಹ ವಿಶಿಷ್ಟ ಕಲಾತಪಸ್ವಿಗಳ ಜೀವನ, ಸಾಧನೆ ಮತ್ತು ಕಲಾ ವೈಶಿಷ್ಟ್ಯಗಳನ್ನು ದಾಖಲಿಸುವ ದೃಷ್ಟಿಯಿಂದ ಪುಸ್ತಕಗಳನ್ನೂ ಪ್ರಕಟಿಸುತ್ತಿದೆ.

ಅತ್ಯಂತ ಪ್ರಾಚೀನ ಕಲೆಯಾದ ಹರಿಕಥೆ ಅಥವಾ ಕಥಾ ಕೀರ್ತನೆಯನ್ನು ಜನಪ್ರಿಯಗೊಳಿಸಿ ಪ್ರಶಸ್ತ ಮಾರ್ಗವನ್ನು ಹಾಕಿ ಕೊಟ್ಟವರಲ್ಲಿ ವೇ॥ ಬ್ರ॥ ಶ್ರೀ ಟಿ.ಕೆ. ವೇಣುಗೋಪಾಲದಾಸರು ಆದರಣೀಯರಾಗಿದ್ದಾರೆ. 90-ವರ್ಷಗಳನ್ನು ದಾಟಿರುವ ದಾಸರು ದೇಶಾದ್ಯಂತ ಸಂಚರಿಸಿ ಸಾವಿರಾರು ಹರಿಕಥೆಗಳನ್ನು ಮಾಡಿ ಈ ಕಲಾ ಪ್ರಕಾರಕ್ಕೆ ಬಹುಮೂಲ್ಯ ಕೊಡುಗೆಯನ್ನಿತ್ತಿದ್ದಾರೆ.

ಶ್ರೀ ವೇಣುಗೋಪಾಲದಾಸರನ್ನು ಬಹಳ ಹತ್ತಿರದಿಂದ ನೋಡಿರುವ, ಆತ್ಮೀಯ ಒಡನಾಟವಿರುವ ವಿದ್ವಾಂಸ-ಲೇಖಕ ಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿಯವರು ನಮ್ಮ ಪ್ರಾರ್ಥನೆಯಂತೆ ಸುಂದರ ಹಾಗೂ ಸಮಗ್ರ ಮಾಹಿತಿಯ ಪುಸ್ತಕವನ್ನು ತಯಾರು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅರಳುಮಲ್ಲಿಗೆ ಪಾರ್ಥಸಾರಥಿ ಅವರಿಗೆ ಧನ್ಯವಾದಗಳು. ಇದರ ಆಂಗ್ಲ ಆವೃತ್ತಿಯೂ ಇದರೊಂದಿಗೆ ಪ್ರಕಟವಾಗುತ್ತಿದೆ.

ಪುಸ್ತಕವನ್ನು ಆ ರೂಪದಲ್ಲಿ ನಮ್ಮ ಹಸ್ತಗತ ಮಾಡಿರುವ ಶ್ರೀರಂಗ ಪ್ರಿಂಟರ್ಸ್ ಅವರಿಗೆ ಅಭಿನಂದನಾಪೂರ್ವಕ ವಂದನೆಗಳು. ಪುಸ್ತಕ ಮುದ್ರಣದಲ್ಲಿ ಸಹಕಾರ ನೀಡಿದ ಪ್ರಧಾನ ಸಂಪಾದಕ ಡಾ. ಎಂ. ಸೂರ್ಯಪ್ರಸಾದ್, ರಿಜಿಸ್ಟ್ರಾರ್, ಶ್ರೀಮತಿ ದುರ್ಗಾ ಸಿ. ಅವರ್ತಿ, ಅಕಾಡೆಮಿಯ ಎಲ್ಲಾ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

ಶ್ರೀಮುಖ ಸಂ॥ ಮಾಘ ಮಾಸ
ಫೆಬ್ರವರಿ, 1994
ಬೆಂಗಳೂರು-560 002

**ಪಂ. ಆರ್.ವಿ. ಶೇಷಾದ್ರಿ ಗವಾಯಿ**
ಅಧ್ಯಕ್ಷರು

## ಪ್ರಧಾನ ಸಂಪಾದಕರ ಲೇಖನಿಯಿಂದ....

ಶಿಷ್ಟಪರಂಪರೆ, ಶಾಸ್ತ್ರೀಯ ಮರ್ಯಾದೆಯ ಮತ್ತು ಸಂಕೀರ್ಣ ಕಲೆಯಾದ ಹರಿಕಥೆ ಅಥವಾ ಕಥಾಕೀರ್ತನೆ ಬಲಿಷ್ಠ ಸಂವಹನಾ ಮಾಧ್ಯಮವಾಗಿ, ಜ್ಞಾನವರ್ಧನೆ ಹಾಗೂ ರಂಜಕತೆಯ ಮೌಲ್ಯಗಳಿಂದ ಜನಪ್ರಿಯತೆಯನ್ನು ಗಳಿಸಿಕೊಂಡಿದೆ. ಬದಲಾದ ಪರಿಸ್ಥಿತಿಗಳಲ್ಲಿ ಅದು ಹ್ರಾಸೋನ್ಮುಖವಾದುದು ಐತಿಹಾಸಿಕ ಸತ್ಯವೇ.

ಎಲ್ಲ ರೀತಿಯ ಎಡರು-ತೊಡರುಗಳನ್ನೂ ಮೆಟ್ಟಿ ಧೃತಿಗೆಡದೆ ಪುರಾತನ ಕಲೆಯಾದ ಹರಿಕಥೆಯ ದಿಕ್ಕು-ದೆಸೆಯನ್ನು ಬದಲಿಸಿ, ಅದರ ಪೂರ್ವೋತ್ತರ ಅಭಿವೃದ್ಧಿಗಾಗಿ ಉತ್ತಮ ಅಲುಗಾಡದ ಅಡಿಪಾಯವನ್ನು ಹಾಕಿಕೊಟ್ಟ ವಿದ್ವಾಂಸರು ಬೆರಳೆಣಿಕೆಯಷ್ಟು ಮಾತ್ರ.. ಅಂತಹ ವಿದ್ವಾಂಸರಲ್ಲಿ ಜ್ಞಾನಸಂಪನ್ನರೂ, ಕಲಾವಿದರೂ ಆದ ವೇ|| ಬ್ರ|| ಶ್ರೀ ಟಿ. ಕೆ. ವೇಣುಗೋಪಾಲದಾಸರು ಪ್ರಮುಖರಾಗಿದ್ದಾರೆ.

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಸಾಂಸಾರಿಕ ತಾಪತ್ರಯಗಳು, ಆಘಾತ-ಅಡಚಣೆಗಳನ್ನು ನಿರಾತಂಕವಾಗಿ ದಾಟಿ ಮುನ್ನಡೆದ ದಾಸರ ಸಾಧನೆಗಳೇನೆಂಬುದನ್ನು ವಿದ್ವಾಂಸ-ಲೇಖಕ ಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ ಯವರು ಸರಸವಾಗಿ ವಿಶ್ಲೇಷಿಸಿದ್ದಾರೆ. ದಾಸರ ಜೀವನ, ಅವರು ನಡೆದ ದಾರಿ, ಹರಿಕಥಾ ಪ್ರಕಾರದ ಪುನರುಜ್ಜೀವನ ಮತ್ತು ಅದಕ್ಕೆ ಅವರ ಸವಿಶೇಷ ಕೊಡುಗೆಯನ್ನು ಲೇಖಕರು ಸಾಧಾರವಾಗಿ ಮಂಡಿಸಿದ್ದಾರೆ.

ಪಾರ್ಥಸಾರಥಿಯವರ ಪ್ರವಾಹಪೂರ್ಣ ಭಾಷಾ-ಶೈಲಿ, ವಿಚಾರಗಳನ್ನು ಅರುಹುವಾಗ ಸರಸತೆ, ಪಳಗಿದ ನಿರೂಪಣಾ ವೈಖರಿ ಮುಂತಾದ ಗುಣ-ವಿಶೇಷಗಳು ಓದುಗನನ್ನು ಆದ್ಯಂತ ಆಕರ್ಷಿಸುವಂತಿದೆ.

ಡಾ. ಎಂ. ಸೂರ್ಯಪ್ರಸಾದ್
ಪ್ರಧಾನ ಸಂಪಾದಕರು

# ವೇಣುಗೋಪಾಲದಾಸರು

**– ಅರಳುಮಲ್ಲಿಗೆ ಪಾರ್ಥಸಾರಥಿ**

ಸಂಗೀತ, ನೃತ್ಯ, ಸಂಕೀರ್ತನ, ನಾಟಕ ಮುಂತಾದ ಕಲಾವಿದರಿಗೆ ಬದುಕಿನ ಚಾಲನೆಯ ಸ್ಥಳವಾಗಿರುವ ತುಮಕೂರು ಜಿಲ್ಲೆ ಗುಬ್ಬಿ ವೀರಣ್ಣ, ಸಿ.ಬಿ. ಮಲ್ಲಪ್ಪ, ಗಂಗಾಧರರಾಯರು, ಮೂಕನಹಳ್ಳಿ ಸುಬ್ಬರಾಯರು, ವೇಣುಗೋಪಾಲದಾಸರು, ವೆಂಕಣ್ಣದಾಸರು ಮುಂತಾದ ಅತಿರಥಮಹಾರಥರನ್ನು ಕಲಾಜಗತ್ತಿಗೆ ಒದಗಿಸಿದೆ. ತುಮಕೂರಿನ ಜನತೆ ಇಂದಿಗೂ ಸಂಗೀತ, ನೃತ್ಯ, ಹರಿಕಥೆ, ನಾಟಕಗಳ ಕಲಾರಾಧಕರು. ತುಮಕೂರಿನಲ್ಲಿ ಕಥೆ ಮಾಡಿ ಜಯಿಸಿದವನು, ತುಮಕೂರಿನಲ್ಲಿ ನಾಟಕ ಮಾಡಿ ಗೆದ್ದವನು ಜಗತ್ತಿನ ಯಾವ ಭಾಗದಲ್ಲಿ ಬೇಕಾದರೂ ಜಯಿಸಿ ಬರಬಲ್ಲ ಎಂದು ಕನ್ನಡದ ಧೀಮಂತ, ಪ್ರವರ್ತನಶೀಲ ಕಲಾವಿದ ಕೈಲಾಸಂ ಅಭಿಪ್ರಾಯಪಟ್ಟಿದ್ದಾರೆ.

ತುಮಕೂರಿನಲ್ಲಿ ರಂಗಭೂಮಿ ಹಾಗೂ ವೃತ್ತಿನಾಟಕಗಳ ಜನಪ್ರಿಯತೆ ಯಂತೆಯೇ ಹರಿದಾಸ ಸಂಸ್ಕೃತಿ, ಹರಿಕಥಾ ಕಲೆಗಳಿಗೂ ಅಪಾರ ಜನಮನ್ನಣೆ ಹಾಗೂ ಬೇಡಿಕೆ ಇತ್ತು. ಹತ್ತಿರದ ದೇವರಾಯನದುರ್ಗದ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯನ್ನು ಆರಾಧ್ಯದೈವವನ್ನಾಗಿರಿಸಿಕೊಂಡ ದೊಡ್ಡಬಳ್ಳಾಪುರದ ದಾಸರುಗಳು ಲಕ್ಷ್ಮೀನರಸಿಂಹ ಸ್ವಾಮಿಯ ಮೇಲಿನ ಅಭಿಮಾನ, ಭಕ್ತಿಗಳಿಂದಾಗಿ ತುಮಕೂರನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಪುರಂದರದಾಸರ ಸಾಕ್ಷಾತ್ ಗುರುಗಳಾಗಿದ್ದ ವ್ಯಾಸರಾಜರ ಪ್ರಸಿದ್ಧ ಮಠವೊಂದು ತುಮಕೂರಿನಲ್ಲಿದ್ದು, ಅದರ ಉಸ್ತುವಾರಿಕೆಯು ತುಮಕೂರು ವೆಂಕಣ್ಣದಾಸರು ಹಾಗೂ ವೇಣುಗೋಪಾಲದಾಸರ ಕೈಯಲ್ಲಿದ್ದು ದಾಸಸಾಹಿತ್ಯ ಪ್ರಚಾರದ ಆಂದೋಲನದಲ್ಲಿ ಈ ವ್ಯಕ್ತಿಗಳು ಶಕ್ತಿಗಳಾಗಿ ಶ್ರಮಿಸಲು ಸಾಧ್ಯವಾಯಿತು.

ಹರಿಕಥಾ ವಿದ್ವನ್ಮಣಿಗಳೆನಿಸಿರುವ ಟಿ.ಕೆ. ವೇಣುಗೋಪಾಲದಾಸರು ಇಡೀ ಕರ್ನಾಟಕದ ಹರಿಕಥಾ ಕಲಾಪ್ರಪಂಚದಲ್ಲಿ ವಿಖ್ಯಾತರಾಗಿರುವಂತೆಯೇ ಅರಮನೆ

ಗುರುಮನೆಗಳಲ್ಲೂ ಕೀರ್ತಿ ಪಡೆದಿರುವ ಸುಪ್ರಸಿದ್ಧ ವ್ಯಕ್ತಿಗಳು. ಒಂಬತ್ತು ದಶಕಗಳಿಗೂ ಹೆಚ್ಚು ಕಾಲ ಹರಿದಾಸರಾಗಿ, ಕೀರ್ತನಕಾರರಾಗಿ, ಸಂಗೀತ ಕಲಾವಿದರಾಗಿ, ದಾಸಸಾಹಿತ್ಯದಲ್ಲಿ ಈಗಲೂ ಸಂಶೋಧನೆ ಮಾಡುತ್ತಿರುವ ಧೀಮಂತ ವ್ಯಕ್ತಿ ವೇಣುಗೋಪಾಲದಾಸರು. ನಾಡಿನಾದ್ಯಂತ ಸಂಚರಿಸಿ ಹರಿದಾಸರ ಸಂಗೀತ ಸಾಹಿತ್ಯ ಸಾಧನೆಗಳನ್ನು ಜನಸಾಮಾನ್ಯರಿಗೆ ತಿಳಿಸುತ್ತಾ, ದಾಸಸಾಹಿತ್ಯದ ವ್ಯಾಪಕ ಪ್ರಚಾರ ಮಾಡುತ್ತಿರುವ ಇವರು ಇಂದಿಗೂ ದಾಸಸಾಹಿತ್ಯದ ಸಂಜೀವಿನೀ ಶಕ್ತಿ.

ಇವರು ರಚಿಸಿರುವ ಭಾಗವತ, ಪುರಂದರದಾಸರು, ಜಗನ್ನಾಥದಾಸರು ಮುಂತಾದ ಕೃತಿಗಳು ದಾಸದುಂದುಭಿಯನ್ನು ಉತ್ತರೋತ್ತರ ಮೊಳಗಿಸಬಲ್ಲ ಉಜ್ವಲ ಕೃತಿಗಳು. ದಿನದಿನ ಜನರಾಡುವ ದೈನಂದಿನ ಸರಳ ಆಡುಭಾಷೆಯಲ್ಲೇ ಹರಿಕಥಾ ಕಲೆಯ ಸೊಬಗು ಸೊಗಡುಗಳನ್ನು ಜನಸಾಮಾನ್ಯರಿಗೆ ಹಂಚುತ್ತಾ, ಸಾಮೂಹಿಕ ಬದುಕಿನ ಜೀವಂತ ಶಕ್ತಿಯಾಗಿ ತಮ್ಮ ಅನುಭವಸಿದ್ಧ ಜ್ಞಾನನುಡಿಗಳ ಮೂಲಕ ಜನರನ್ನು ಅನುಭಾವದ ಎತ್ತರಗಳಿಗೆ ಕರೆದೊಯ್ಯುತ್ತಿರುವ ಸಂಕೀರ್ತನಕಾರರು ವೇಣುಗೋಪಾಲದಾಸರು.

**ಮನೆತನ:**

ಪುರಂದರದಾಸರಿಂದ ಸ್ವಪ್ನದ ಮೂಲಕ ''ವಿಜಯವಿಠಲ'' ಅಂಕಿತ ಪಡೆದು ಸಹಸ್ರಾರು ಸುಳಾದಿ, ಪದಪದ್ಯಗಳನ್ನು ಬರೆದು ಪ್ರಸಿದ್ಧ ಅಪರೋಕ್ಷ ಜ್ಞಾನಿಗಳೆನಿಸಿಕೊಂಡವರು ವಿಜಯದಾಸರು. ಇವರಿಂದ 'ವೇಣುಗೋಪಾಲ ವಿಠಲ' ಎಂಬ ಅಂಕಿತ ಸ್ವೀಕರಿಸಿ ಪ್ರಖ್ಯಾತರಾದ ಪಂಗನಾಮ ತಿಮ್ಮಣ್ಣದಾಸರ ವಂಶದವರೇ ಮುಂದೆ ದೊಡ್ಡಬಳ್ಳಾಪುರದ ದಾಸರುಗಳೆಂದು ವಿಖ್ಯಾತರಾದರು. ವೇದವೇದಾಂತದ ರಹಸ್ಯವನ್ನು ತಿಳಿಗನ್ನಡದಲ್ಲಿ ಸರಳವಾಗಿ ತಿಳಿಸಿರುವ ದೊಡ್ಡಬಳ್ಳಾಪುರದ ಮುದ್ದು ಮೋಹನದಾಸರು, ದಾಸ ಸಂಪ್ರದಾಯವನ್ನು ಉದ್ದೀಪಿಸಿದ ಅವರ ಶಿಷ್ಯ ಪರಮಪ್ರಿಯ ಸುಬ್ಬರಾಯದಾಸರು ಅಥವಾ ತಂದೆ ಮುದ್ದು ಮೋಹನ ವಿಠಲದಾಸರು, ದೊಡ್ಡಬಳ್ಳಾಪುರ ದಾಸರ ಪರಂಪರೆಯಲ್ಲಿ ಕಡೆಯ ಅಪರೋಕ್ಷ ಜ್ಞಾನಿಗಳೆಂದು ಖ್ಯಾತರಾದ ಶ್ರೀ ರಾಮದಾಸರು ಅಥವಾ ಕರಿವರದ ವಿಠಲಾಂಕಿತದಾಸರು ಇವರೆಲ್ಲಾ ವಿಜಯದಾಸರ ಶಿಷ್ಯರಾದ ಪಂಗನಾಮ ತಿಮ್ಮಣ್ಣದಾಸರ ವಂಶಪರಂಪರೆಯಲ್ಲಿ ಬಂದವರು. ಇದೇ ವಂಶದಲ್ಲಿ ಬಂದ ಶಂಕರಪುರದ ವೆಂಕಟದಾಸರು ಜ್ಞಾನದಾಯಕ ವಿಠಲರೆಂಬ ಹೆಸರಿನಿಂದ ಪ್ರಖ್ಯಾತರಾಗಿದ್ದು ಅವರ ನೇರ ಸಂತತಿಯವರಾಗಿ ಬಂದ ವೇಣುಗೋಪಾಲದಾಸರು

ಕರ್ನಾಟಕ, ಆಂಧ್ರ, ತಮಿಳುನಾಡು ಮುಂತಾದ ನಾನಾ ಭಾಗಗಳಲ್ಲಿ, ಜನತೆ ರೋಮಾಂಚನಗೊಳ್ಳುವಂತೆ ಲಯವನ್ನು, ಇಂಪನ್ನು, ಭಕ್ತಿಯನ್ನು ತಮ್ಮ ಹರಿಕಥಾ ಕಲೆಯ ಮೂಲಕ ನೀಡಿ ಹರಿಕಥಾ ಕಲೆಯನ್ನು ಉದ್ಧರಿಸಿ, ಹರಿಕಥೆಯನ್ನು ಸಮಾಜದ ವ್ಯಾಪಕ, ಕಲಾತ್ಮಕ ಅಂಗವನ್ನಾಗಿ ಪರಿವರ್ತಿಸಿ ಜನಪ್ರಿಯಗೊಳಿಸಿದರು.

ವೇಣುಗೋಪಾಲದಾಸರ ವೃತ್ತಿ, ಬದುಕು ಹಾಗೂ ಸಾಧನೆಗಳು ನಿಜಕ್ಕೂ ಅಚ್ಚರಿ ಮೂಡಿಸುವಂತಹುದು. ಪರಂಪರೆಯಿಂದ ಬಂದ ಮಹಾಭಾರತ, ರಾಮಾಯಣ, ಭಾಗವತಗಳ ಸಮಗ್ರ ಅಧ್ಯಯನದ ಫಲವಾಗಿ ಮೂಡಿಸಿಕೊಂಡ ಅಪೂರ್ವ ಸಂಕೀರ್ತನ ಸಾಧನೆಯ ವ್ಯಕ್ತಿತ್ವವೇ ವೇಣುಗೋಪಾಲದಾಸರು. ನೋಡಲು ಅಜಾನುಬಾಹುಗಳು. ಮೂರ್ತಿಯೂ ದೊಡ್ಡದು. ಕೀರ್ತಿಯೂ ದೊಡ್ಡದು. ಸಾತ್ವಿಕ ಮನೆತನ, ವಸಿಷ್ಠ ಗೋತ್ರ, ಹುಟ್ಟಿದ್ದು ತುಮಕೂರಿನಲ್ಲಿ. ತಂದೆ ವ್ಯಾಸರಾಜ ಮಠಾಧಿಕಾರಿಗಳಾಗಿದ್ದ ಮೂರ್ತಾಚಾರ್ಯರು, ತಾಯಿ ಸರಸ್ವತಮ್ಮ. 1901ರಲ್ಲಿ ಈ ದಂಪತಿಗಳ ಹತ್ತನೆಯ ಮಗನಾಗಿ ಜನಿಸಿದ ಇವರನ್ನು ಒಂದೂವರೆ ವರ್ಷಗಳ ನಂತರ ತಂದೆಯ ಚಿಕ್ಕಪ್ಪ ವ್ಯಾಸರಾಜ ಮಠದ ಸುಬೇದಾರರಾಗಿದ್ದ ಕರಿಗಿರಿ ಆಚಾರ್ಯರು ದತ್ತಾಗಿ ಪಡೆದರು.

ವೇಣುಗೋಪಾಲದಾಸರ ಪೂರ್ವಿಕರು ಒಂದು ಕುತೂಹಲಕಾರೀ ಘಟನೆಯನ್ನು ಈಗಲೂ ಆ ಮನೆತನದಲ್ಲಿ ಹೇಳುತ್ತಾರೆ. ಅವರ ಪೂರ್ವಿಕರು ವಿಜಯನಗರ ಸಾಮ್ರಾಜ್ಯದಿಂದ ಬಂದವರು. ವಿಜಯನಗರದಲ್ಲಿ ಗೋಪಾಲಕೃಷ್ಣ ದೇವರ ಪೂಜಾಕೈಂಕರ್ಯವನ್ನು ಮಾಡುತ್ತಾ ವೇದವೇದಾಂತಗಳಲ್ಲಿ ಪಾರಂಗತರಾಗಿದ್ದವರು. ವಿಜಯನಗರ ಪತನವಾದಾಗ, ಅನೇಕ ದೇವಾಲಯಗಳಲ್ಲಿ ವಿಗ್ರಹಗಳು ಭಿನ್ನವಾಗುತ್ತಿದ್ದಾಗ, ಅಣ್ಣತಮ್ಮಂದಿರಿಬ್ಬರೂ ಗೋಪಾಲಕೃಷ್ಣದೇವರ ವಿಗ್ರಹವನ್ನು ಕೆಂಪು ಸೀರೆಯಿಂದ ಪೂರ್ತಿ ಮಡಿಸಿ ಒಂದು ಗಾಡಿಯಲ್ಲಿ ಹಾಕಿಕೊಂಡು ತಮ್ಮ ತಾಯಿ ಸತ್ತಂತೆ, ತಾವು ಆ ಮಡಿಹೆಂಗಸಿನ ದೇಹವನ್ನು ಅಂತ್ಯಕ್ರಿಯೆಗಾಗಿ ಸಾಗಿಸುತ್ತಿರುವಂತೆ ವ್ಯವಸ್ಥೆ ಮಾಡಿ ಊರಿಂದೂರಿಗೆ ಬಂದು ಕಡೆಗೆ ತುಮಕೂರು ಜಿಲ್ಲೆಯ ಕುದೂರಿನಲ್ಲಿ ದೇವರನ್ನಿಟ್ಟರು. ಇದಾದ ಕೆಲವೇ ದಿನಗಳಲ್ಲಿ ಮಾರ್ವಾಡಿಯೊಬ್ಬನಿಗೆ ಸ್ವಪ್ನಸೂಚನೆಯಾದಂತಾಗಿ ಅವನಿಂದ ತುಮಕೂರಿನಲ್ಲಿ ವ್ಯಾಸರಾಜ ಮಠದ ನಿರ್ಮಾಣವಾಯಿತು. ಗೋಪಾಲಕೃಷ್ಣದೇವರಿಗೆ ಉತ್ತಮ ದೇವಾಲಯ ನಿರ್ಮಾಣವಾಯಿತು. ಆ ಪರಂಪರೆಯವರೇ ಮುಂದೆ ನಿರಂತರವಾಗಿ ಈ ದೇವಸ್ಥಾನದ ಪೂಜಾಕೈಂಕರ್ಯಗಳನ್ನು ನಿರ್ವಹಿಸತೊಡಗಿದರು.

ಕರಿಗಿರಿ ಆಚಾರ್ಯರು ಈ ಮಗುವನ್ನು ದತ್ತು ಪಡೆದುಕೊಂಡರೂ, ಮಗುವಿಗೆ ನಾಲ್ಕು ವರ್ಷವಾಗಿದ್ದಾಗಲೇ ತೀರಿಕೊಂಡರು. ಅನಂತರ ಅವರ ಪತ್ನಿ ಪುಟ್ಟನರಸಮ್ಮ ಮಗುವನ್ನು ವಿಧಿಯುಕ್ತವಾಗಿ ದತ್ತು ಮಾಡಿಕೊಂಡರು. ಎಂಟನೆಯ ವಯಸ್ಸಿಗೆ ಉಪನಯನ. ಗರ್ಭಾಷ್ಟಮದಲ್ಲಿ ಉಪನೀತವಾದ ಹುಡುಗ ವೇಣುಗೋಪಾಲ. ತುಮಕೂರಿನಲ್ಲಿ ಶೃಂಗೇರಿ ಮಠದ ವತಿಯಿಂದ ವ್ಯವಸ್ಥೆಯಾಗಿದ್ದ ಪಾಠಶಾಲೆಯಲ್ಲಿ ಋಗ್ವೇದಾಷ್ಟಕವನ್ನು, ಮುಂಜಿ ಮದುವೆ ಮಾಡಿಸುವ ಪೌರೋಹಿತ್ಯವನ್ನು ಕಲಿತುಕೊಂಡರು. ಬಾಲಪಾಠ ಹೇಳಿಕೊಡುತ್ತಿದ್ದ ಪಂಡಿತ ಮಧ್ವಾಚಾರ್ಯರು ಮೃತರಾದ್ದರಿಂದ ಹತ್ತನೇ ವಯಸ್ಸಿನಲ್ಲಿ ಕನ್ನಡ ಶಾಲೆಗೆ ಸೇರಿದರು. 1912ರಲ್ಲಿ ಇಂಗ್ಲೀಷ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಹದಿನಾಲ್ಕನೆಯ ವಯಸ್ಸಿಗೇ ಆಗ ಸುಪ್ರಸಿದ್ಧ ಪುರಾಣಿಕರಾಗಿದ್ದ ಹೊಳವನಹಳ್ಳಿ ಶೇಷಾಚಾರ್ಯರ ಪತ್ನಿಯ ತಮ್ಮ ವೆಂಕಟರಮಣಾಚಾರ್ಯರ ಮಗಳು ಲಕ್ಷ್ಮಿಯೊಡನೆ ಬಾಲಕ ವೇಣುಗೋಪಾಲನ ಲಗ್ನವೂ ನೆರವೇರಿತು. ಅನಂತರ ಹದಿನಾರನೇ ವಯಸ್ಸಿಗೆ ತುಮಕೂರಿನ ಗುಬ್ಬಿ ಸಬ್ ಡಿವಿಜನ್ ಆಫೀಸಿನಲ್ಲಿ ತಾತ್ಕಾಲಿಕ ಕಾಪಿಯಿಸ್ಟ್ ಕೆಲಸವನ್ನು ಮಾಡತೊಡಗಿದರು. ನಂತರ ತುಮಕೂರು ಮುನ್‌ಸೀಫ್ ನ್ಯಾಯಾಲಯದಲ್ಲಿ ಸರ್ಕಾರೀ ಕೆಲಸವೂ ದೊರೆಯಿತು. ಮೂರೇ ತಿಂಗಳಿಗೆ ಅಲ್ಲಿ ರಾಜೀನಾಮೆ ನೀಡಿ ವಿದ್ಯಾ ಇಲಾಖೆಗೆ ಸೇರಿ ಉಪಾಧ್ಯಾಯ ವೃತ್ತಿಯನ್ನು ಹಿಡಿದರು. ಉಪಾಧ್ಯಾಯರಾದ ವೇಣುಗೋಪಾಲರ ಪ್ರತಿಭೆಯನ್ನು ನೋಡಿ ಸರ್ಕಾರದವರು ಸರ್ಕಾರೀ ನಾರ್ಮಲ್ ಶಾಲೆಗೆ ವಿಶೇಷ ತರಬೇತಿಗಾಗಿ ಕಳುಹಿಸಿದರು. ಒಂದು ವರ್ಷದ ಈ ವಿಶೇಷ ತರಬೇತಿಯಾದ ಮೇಲೆ ಆರು ವರ್ಷಗಳ ಕಾಲ ತುಮಕೂರಿನಲ್ಲಿ ಉಪಾಧ್ಯಾಯ ವೃತ್ತಿಯಲ್ಲಿ ಸೇವೆ ಸಲ್ಲಿಸಿದರು. ಸಂಸ್ಕಾರದಲ್ಲಿ ಬಂದಿದ್ದ ಕಲೆ, ಸಂಗೀತ, ಸಾಹಿತ್ಯ ಇವಾವುದರ ಅಭಿವ್ಯಕ್ತಿಗೂ ಈ ವೃತ್ತಿಯಲ್ಲಿ ಅವಕಾಶವಾಗದೇ, ಯಾವ ಪ್ರೋತ್ಸಾಹವೂ ಇಲ್ಲದೆ ಜಿಗುಪ್ಸೆ ಪ್ರಾರಂಭವಾಯಿತು.

ಅವರ ಬದುಕಿನ ಭವಿಷ್ಯದ ನಿರ್ಧಾರದ ಕ್ಷಣಗಳು ಒಮ್ಮೆಗೇ ಎದುರಾದಂತೆನಿಸಿತು. ಎಷ್ಟು ವರ್ಷ ದುಡಿದರೂ ಯಾವ ಕಿಮ್ಮತ್ತೂ, ಪ್ರೋತ್ಸಾಹವೂ ದೊರಕಲಾಗದ ಉಪಾಧ್ಯಾಯ ವೃತ್ತಿಯೊಂದು ಕಡೆ, ತನ್ನ ಬದುಕಿನ ಸರ್ವಸ್ವವಾದ ಹರಿಕಥೆ, ಸಾಹಿತ್ಯ, ಸಂಗೀತಗಳ ತೀವ್ರ ಕರೆಯೊಂದು ಕಡೆ, ಹೀಗೆ ಕೆಲದಿನಗಳ ಕಾಲ ತಾತ್ವಿಕ ಸಂಘರ್ಷ ನಡೆದು ಕಡೆಗೆ ಸಂಗೀತ ಸಂಕೀರ್ತನೆಗಳ ಅಗಾಧ ಸಾಧ್ಯತೆಯೆದುರು

ಸಾಮಾನ್ಯ ಶಾಲಾ ಅಧ್ಯಾಪಕನ ವೃತ್ತಿ ಸತ್ವಹೀನವೆನಿಸಿ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ನೀಡಿ ಹೊರಬಂದರು.

**ಸಂಗೀತ ಸಂಸ್ಕರಣ:**

ಚಲನಚಿತ್ರಗಳು ಪ್ರದರ್ಶಿತವಾಗದಿದ್ದ, ಆ ತಂತ್ರಜ್ಞಾನವೇ ಇಲ್ಲದಿದ್ದ ಆ ಕಾಲದಲ್ಲಿ ನಾಡಿನ ಜನಕ್ಕೆ ಅತ್ಯಂತ ಅಪ್ಯಾಯವಾಗಿ, ರೋಚಕವಾಗಿ, ಕಲಾತ್ಮಕವಾಗಿ ದೊರೆಯುತ್ತಿದ್ದ ವಿಶೇಷ ಮನರಂಜನೆಯೆಂದರೆ ಹರಿಕಥೆ. ಹರಿಕಥೆಗೆ ಹಿನ್ನೆಲೆಯಾಗಿ ಕೀರ್ತನಕಾರರು ಉನ್ನತ ಕಂಠದ ಸಂಗೀತದ ಮೆರುಗನ್ನು ನೀಡಿ ಕಥೆಯನ್ನು ಕಳೆಗಟ್ಟಿಸುತ್ತಿದ್ದ ಕಾಲ. ಆಗ ಬೆಂಗಳೂರಿನಲ್ಲಿ ಹರಿಕಥೆಯನ್ನು ಪರಮ ಮುಖ್ಯ ವೃತ್ತಿಯನ್ನಾಗಿ ಹಿಡಿದು, ಮನರಂಜನೆಯಿಂದ ಹೃದಯ ಸಂಸ್ಕರಣದತ್ತ ಜನರನ್ನು ಪರಿವರ್ತಿಸಲು ವ್ಯಾಪಕವಾಗಿ ಪ್ರಯತ್ನಿಸುತ್ತಿದ್ದವರು ವೆಂಕಣ್ಣದಾಸರು. ಅವರು ವೇಣುಗೋಪಾಲದಾಸರ ಅಣ್ಣಂದಿರು. ಪ್ರಬುದ್ಧ ಚಿಂತನೆಗೆ, ಪ್ರೌಢ ಸಾಧನೆಗೆ, ಅನುಭವಗಳ ಎತ್ತರಕ್ಕೆ ಜನರನ್ನು ಕರೆದೊಯ್ಯಬೇಕಾದರೆ ಹರಿದಾಸರುಗಳು, ಕೀರ್ತನಕಾರರುಗಳು ಸುತ್ತಲಿನ ಲೋಕಾನುಭವಗಳಿಗೆ, ಪರಂಪರೆಯಿಂದ ಬಂದ ಜ್ಞಾನಭಂಡಾರಕ್ಕೆ ಸಮೃದ್ಧವಾಗಿ ತಮ್ಮನ್ನು ಒಡ್ಡಿಕೊಳ್ಳಬೇಕೆಂದು ವೆಂಕಣ್ಣದಾಸರು ಸ್ಪಷ್ಟವಾಗಿ ಹೇಳುತ್ತಿದ್ದರು.

ವೆಂಕಣ್ಣದಾಸರ ದೃಷ್ಟಿಯಲ್ಲಿ ಸಂಗೀತ ಜ್ಞಾನದ ಸಿದ್ಧಿಯಾಗದ ಹರಿಕಥೆ ಕಥೆಯೇ ಅಲ್ಲ. ಹರಿಕಥಾ ಸಂಪ್ರದಾಯದ ಹರಿಕಾರರಾಗಿ, ಇತಿಹಾಸಪುರಾಣಗಳ ಸಮೃದ್ಧ ಪ್ರಜ್ಞೆಯುಳ್ಳವರಾಗಿ, ಸಂಗೀತದ ಮಹತ್ವವನ್ನು ಅರಿತಿದ್ದವರು ವೆಂಕಣ್ಣದಾಸರು. ಈ ಹೋರಾಟ ಬಾಲ್ಯದಿಂದಲೇ ಅವರಿಗೆ ಬಂದ ಭಾಗ್ಯವಾಗಿತ್ತು. ಚಿಕ್ಕ ಹುಡುಗನಾಗಿದ್ದಾಗಲೇ ವೆಂಕಣ್ಣನಿಗೆ ಸಂಗೀತದ ಗಾಳಿಯಲ್ಲಿ ತೇಲುವ ಬಯಕೆ. ಆದರೆ ವೈದಿಕ ಮನೆತನಸ್ಥರಾದ ತಂದೆ ಮೂರ್ತಾಚಾರ್ಯರಿಂದ ಕಂಡಕಂಡಲ್ಲಿ ಸಂಗೀತ ಕೇಳುವ ಕೆಟ್ಟ ಪರಿಪಾಠ ಕೂಡದೆಂದು ಕಟ್ಟಪ್ಪಣೆ. ಆ ಪರಿಸ್ಥಿತಿಯಿದ್ದಾಗಲೇ ನಾಡಿನ ಖ್ಯಾತ ಗಾಯಕರಾಗಿದ್ದ ಭೈರವೀ ಕೆಂಪೇಗೌಡರು ತುಮಕೂರಿಗೆ ಆಗಮಿಸಿದರು. ವೆಂಕಣ್ಣನಿಗೆ ಇನ್ನೂ ಹದಿನೈದು ವರ್ಷ. ತಂದೆಯ ಕಟ್ಟುನಿಟ್ಟಿನ ಕಟ್ಟಪ್ಪಣೆಯನ್ನು ವೆಂಕಣ್ಣನ ಸಂಗೀತ ಕಲಿಯುವ ಛಲ ಬಿಡಿಸಿಕೊಂಡಿತು. ತುಮಕೂರಿನಲ್ಲಿ ಭೈರವೀ ಕೆಂಪೇಗೌಡರ ಸಂಗೀತ ಕೇಳಲು ನೂಕುನುಗ್ಗಲು. ಪ್ರತಿನಿತ್ಯ ಬಾಲಕ ವೆಂಕಣ್ಣ ಸಂಗೀತ ಕಛೇರಿಗೆ ಹಾಜರ್. ಅವರ ಸಂಗೀತ ಕೇಳಿಯೇ ಪ್ರತಿಭಾವಂತವಾಗಿದ್ದ ವೆಂಕಣ್ಣ ಭೈರವೀ, ತೋಡೀ ರಾಗಗಳಲ್ಲಿ ಪ್ರಾವೀಣ್ಯ ಪಡೆದಿದ್ದರು. ಒಂದು ದಿನ ಭೈರವಿ ಕೆಂಪೇಗೌಡರ

ಬಿಡಾರದತ್ತ ವೆಂಕಣ್ಣ ಬರುತ್ತಿದ್ದಾಗ ಗೌಡರ ಸುಶ್ರಾವ್ಯ ಸಂಗೀತ ಲಹರಿ ಅವರನ್ನು ಅಲ್ಲೇ ತಡೆದು ನಿಲ್ಲಿಸಿತು. ಕಿಟಕಿಯಲ್ಲಿ ಬಗ್ಗಿ ನೋಡಿದರೆ ವೆಂಕಣ್ಣನಿಗೆ ಅಚ್ಚರಿ ಕಾದಿತ್ತು. ಸಾಕ್ಷಾತ್ ತನ್ನ ತಂದೆ ಮೂರ್ತಾಚಾರ್ಯರು ಭೈರವೀ ಕೆಂಪೇಗೌಡರಿಗೆ ಘಟವನ್ನು ನುಡಿಸುತ್ತಿದ್ದರು.

ಸಂಗೀತಕಲೆ ತಮ್ಮ ಕುಟುಂಬದ ರಕ್ತದಲ್ಲೇ, ಸಂಸ್ಕಾರದಲ್ಲೇ ಬಂದಿದೆ ಎನ್ನುವುದನ್ನು ಅರಿತಿದ್ದ ವೆಂಕಣ್ಣದಾಸರು, ವೇಣುಗೋಪಾಲದಾಸರು ತುಮಕೂರು ಬಿಟ್ಟು ಬೆಂಗಳೂರಿಗೆ ಬಂದೊಡನೆಯೇ ಮಾಡಿದ ಮೊದಲ ಕೆಲಸವೆಂದರೆ ಅವರನ್ನು ಸಂಗೀತದ ಮಾರ್ಗಕ್ಕೆ ಹಚ್ಚಿದ್ದು. ವೆಂಕಣ್ಣದಾಸರ ಬಳಿ ಹರಿಕಥೆ ಕಲಿಯಲು ಬಂದ ವೇಣುಗೋಪಾಲದಾಸರಿಗೆ ದೊರೆತ ಮೊದಲ ತರಬೇತಿಯೆಂದರೆ ಹಾರ್ಮೋನಿಯಂ ವಾದನ. ವೆಂಕಣ್ಣದಾಸರ ಕಥೆಗಳಿಗೆಲ್ಲಾ ವೇಣುಗೋಪಾಲದಾಸರೇ ಹಾರ್ಮೋನಿಯಂ ವಾದಕರಾದರು. ಆದರೆ ಇದಕ್ಕೆ ಮುಂಚೆಯೇ, ತುಮಕೂರಿನಲ್ಲಿದ್ದಾಗಲೇ ವೇಣುಗೋಪಾಲದಾಸರು ಅಮೆಚೂರ್ ಅಸೋಸಿಯೇಷನ್ ಎಂಬ ನಾಟಕ ಸಂಸ್ಥೆಯಲ್ಲಿ ನಾಟಕಗಳಲ್ಲಿ ಪಾತ್ರ ವಹಿಸುತ್ತಾ, ಹಾಗೆಯೇ ಅಲ್ಲೇ ಹಾರ್ಮೋನಿಯಂ ವಾದನವನ್ನು ಅಭ್ಯಾಸ ಮಾಡಿದ್ದರು.

ವೇಣುಗೋಪಾಲದಾಸರಲ್ಲಿ ಸಂಗೀತದ ಬಗೆಗಿನ ಅಪಾರ ಕಳಕಳಿ, ಒಲವನ್ನು ಕಂಡ ವೆಂಕಣ್ಣದಾಸರು ಅವರನ್ನು ಸಂಗೀತನಿಧಿಯನ್ನಾಗಿ ಮಾಡಬೇಕೆಂದು ನಿಶ್ಚಯಿಸಿ ಆಗ್ಗೆ ನಾಡಿನಲ್ಲಿ ಪ್ರಸಿದ್ಧ ಪ್ರಾಚೀನ ಸಂಗೀತ ವಿದ್ವಾಂಸರಾಗಿದ್ದ ಕೊಳ್ಳೆಗಾಲದ ದಕ್ಷಿಣಾಮೂರ್ತಿ ಶಾಸ್ತ್ರಿಗಳು ಎಂಬುವರಲ್ಲಿಗೆ ಕರೆದೊಯ್ದುಬಿಟ್ಟರು. ದಕ್ಷಿಣಾಮೂರ್ತಿಗಳ ಸಂಗೀತವೆಂದರೆ ಸ್ವರಸಂಚಾರದ ಅಪೂರ್ವ ಅನುಭವ ವಾಗುತ್ತಿದ್ದ, ಸಂಪ್ರದಾಯಬದ್ಧ ಶಿಸ್ತಿನ ಸಂಗೀತ. ವೇಣುಗೋಪಾಲದಾಸರು ಅವರ ಬಳಿ ಹದಿನಾರು ವರ್ಣಗಳು ಹಾಗೂ ಸುಮಾರು ಇನ್ನೂರಮೂವತ್ತು ಕೀರ್ತನೆಗಳನ್ನು ಅಭ್ಯಾಸ ಮಾಡಿದರು. ಸಂಗೀತದ ಸ್ವರ ಹಾಗೂ ಪಲ್ಲವಿಗಳ ಅಭಿವ್ಯಕ್ತಿಯ ವಿಶೇಷ ಸಾಧನೆಗಳನ್ನು ವೇಣುಗೋಪಾಲದಾಸರು ಕರಗತ ಮಾಡಿಕೊಂಡರು.

ಸಂಗೀತ ಕಲೆಯ ಗುಪ್ತ ನಿಧಿಯನ್ನು ವಶ ಮಾಡಿಕೊಂಡಂತೆಯೇ, ಅಣ್ಣಂದಿರಾದ ವೆಂಕಣ್ಣನವರಿಗೆ ಹಾರ್ಮೋನಿಯಂ ನುಡಿಸುತ್ತಲೇ ಹರಿಕಥಾ ಶೈಲಿಯನ್ನು ಸಮಗ್ರ ಗ್ರಹಿಸಿದರು.

ಆ ಕಾಲಕ್ಕೆ ವೆಂಕಣ್ಣನವರ ಹರಿಕಥೆಯೆಂದರೆ ಅದೊಂದು ಅಪೂರ್ವ ಅನುಭವ. ಅವರು ಮೈಸೂರು ಅರಮನೆ ವಿದ್ವಾಂಸರೂ, ಸಂಗೀತ ಕಂಠೀರವರೂ ಆಗಿದ್ದ ಮೈಸೂರು ಕರಿಗಿರಿರಾಯರಲ್ಲಿ ಸಂಗೀತದ ಶಿಷ್ಯತ್ವವನ್ನು ಗಳಿಸಿದ್ದವರು. ಕರಿಗಿರಿರಾಯರ ಸಂಗೀತವೆಂದರೆ, ಅವರ ಸಮಕಾಲೀನರಾಗಿದ್ದ ವೀಣೆ ಶೇಷಣ್ಣನವರು, ವೀಣೆ ಸುಬ್ಬಣ್ಣನವರು, ಸಾಂಬಯ್ಯನವರು, ವೀಣೆ ಶಾಮಣ್ಣ ಮುಂತಾದ ಅತಿರಥ ಮಹಾರಥರುಗಳು ಅವರ ಪಾಂಡಿತ್ಯವನ್ನು ಗೌರವಿಸಿ ಆವರಿಗೆ 'ಸಂಗೀತ ವಿದ್ಯಾಕಂಠೀರವ' ಎಂಬ ಪ್ರಶಸ್ತಿಯನ್ನು, ಚಿನ್ನದ ಘಂಟೆ ಹಾಗೂ ತೋಡಾವನ್ನು ಸಮರ್ಪಿಸಿದರು. ಮೈಸೂರಿನ ಮಹಾರಾಜರೇ ಅವರಿಗೆ 'ಗಾನಕಲಾ ದುರಂಧರ' ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದರು. ಕರಿಗಿರಿರಾಯರೇ ರಚಿಸಿದ್ದ ''ಸಂಗೀತ ಸುಭೋಧಿನಿ'' ಹಾಗೂ ''ಗಾನವಿದ್ಯಾರಹಸ್ಯಪ್ರಕಾಶಿನೀ'' ಎಂಬ ಗ್ರಂಥಗಳು ವಿದ್ವನ್ಮಾನ್ಯವಾಗಿದ್ದವು. 'ನರಸಿಂಹ' ಅಂಕಿತದಿಂದ ಕರಿಗಿರಿರಾಯರು ಅನೇಕ ವರ್ಣ ಕೀರ್ತನೆ ದೇವರನಾಮಗಳನ್ನು ರಚಿಸಿದ್ದರು.

ಹೀಗೆ ಸಂಗೀತಸಾಧನೆ ಹಾಗೂ ಹರಿಕಥಾ ಕಲೆಯ ಸಿದ್ಧಿಯಿಂದ ಇಡೀ ನಾಡಿಗೆ ನಾಡೇ ಮೊಳಗುವಂತೆ ಹರಿಕಥೆ ಮಾಡುತ್ತಿದ್ದ ವೆಂಕಣ್ಣದಾಸರ ಕಥೆಗೆ ಬರುತ್ತಿದ್ದವರಲ್ಲಿ ಕೈಲಾಸಂ, ದೇವುಡು, ಬಿಡಾರಂ ಕೃಷ್ಣಪ್ಪ, ಅ.ನ. ಸುಬ್ಬರಾಯರು ಮುಂತಾದ ಘಟಾನುಘಟಿ ಶ್ರೋತೃಗಳಿರುತ್ತಿದ್ದರು.

ಏಕಸಂಧಿಗ್ರಾಹಿಗಳಾಗಿದ್ದ ವೇಣುಗೋಪಾಲದಾಸರಿಗೆ ಇವೆಲ್ಲ ಕೇವಲ ನಿಮಿತ್ತವಾಗಿ, ಅವರೊಳಗೆ ಹುದುಗಿದ್ದ ಪ್ರತಿಭಾ ಚೈತನ್ಯ ಪುಟಿದೊಡೆಯಿತು. ಎಲ್ಲವನ್ನೂ ಕ್ಷಿಪ್ರದಲ್ಲೇ ಕರಗತ ಮಾಡಿಕೊಂಡರು. ಹರಿಕಥೆ ಹಾಗೂ ಸಂಗೀತ ಸಾಧನೆಯ ಸಹಸ್ಪಂದನವಾದ ಅವರು ಸ್ವಸ್ಥಳವಾಗಿದ್ದ ತುಮಕೂರಿಗೆ ಹರಿಕಥಾ ಕಲೆಯ ಅವತರಣಿಕೆಯ ಉದ್ದೇಶದಿಂದಲೇ ಹಿಂತಿರುಗಿದರು. 1926ರಲ್ಲಿ ಮೊಟ್ಟ ಮೊದಲ ಬಾರಿಗೆ 'ರಾಮಾಯಣ'ವನ್ನು ನಾಲ್ಕು ತಿಂಗಳ ಕಾಲ ಏಕಪ್ರಕಾರವಾಗಿ ತುಮಕೂರಿನಲ್ಲಿ ಮಾಡಿದರು. ಧಾರಾವಾಹಿ ಶೈಲಿಯಲ್ಲಿ ಬರುತ್ತಿದ್ದ ರಾಮಾಯಣದ ಆ ಕಥೆಯನ್ನು ಕೇಳಲು ದೂರದೂರದ ಹಳ್ಳಿಗಳಿಂದ ಜನರು ಬರಲಾರಂಭಿಸಿದರು. ತುಮಕೂರಿನಲ್ಲಿ ವೇಣುಗೋಪಾಲದಾಸರ ಹರಿಕಥೆಯೆಂದರೆ ರಾಮಾಯಣದ ಮಿಂಚಿನ ಸಂಚಾರ ಎನ್ನುವಂತಾಯಿತು. ಆಕರ್ಷಕವಾದ ಉಪಕಥೆಗಳು, ಉತ್ತಮ ಕಂಠದ ಸುಶ್ರಾವ್ಯ ಗಾಯನ, ಆಯಸ್ಕಾಂತದಂತೆ ಸೆಳೆಯುವ ವ್ಯಕ್ತಿತ್ವ, ಆಜಾನುಬಾಹು, ಸುಂದರ ಪುರುಷ, ಗೌರವರ್ಣ, ಕಾಂತಿಯುಕ್ತ ಕಣ್ಣುಗಳು, ಸರಳ

ಸ್ವಭಾವ, ಪ್ರಶಾಂತ ದೃಷ್ಟಿ, ಹೀಗಾಗಿ ಮೊದಲನೆಯ ಹರಿಕಥಾ ಪ್ರಸಂಗವೇ ಅಪಾರ ವಿಶ್ವಾಸ ಮತ್ತು ಭರವಸೆಯನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು.

ತುಮಕೂರಿನಲ್ಲಿ ಹರಿಕಥಾ ಕಾರ್ಯಕ್ರಮ ಸಂಜೆಯ ವೇಳೆಯಾದ್ದರಿಂದ ಉಳಿದ ಸಮಯವನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ನಿರ್ಧರಿಸಿದ ವೇಣುಗೋಪಾಲ ದಾಸರು ಆಗ ತುಮಕೂರಿನಲ್ಲಿ ಪಂಡಿತರೆನಿಸಿದ್ದ ಮೊಸಳೆ ನರಸಿಂಹಯ್ಯನವರಲ್ಲಿ 'ರಾಮಾಯಣ ಚಂಪೂ' ಪಾಠವನ್ನು ವ್ಯಾಸಂಗ ಮಾಡಿದರು. ಹಾಗೆಯೇ ವಿದ್ವಾಂಸರಾಗಿದ್ದ ವೇದಮೂರ್ತಿ ವಿಜಯೀಂದ್ರ ರಾಘವೇಂದ್ರಾಚಾರ್ಯರಲ್ಲಿ ಮಧ್ವಾಚಾರ್ಯರ ಸರ್ವಮೂಲಗ್ರಂಥಗಳಲ್ಲಿ ಮಹತ್ವದ್ದಾಗಿರುವ "ಮಹಾಭಾರತ ತಾತ್ಪರ್ಯ ನಿರ್ಣಯ" ಎಂಬ ಗ್ರಂಥವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದರು. ಇದಲ್ಲದೆ ಹಿನ್ನೆಲೆಯಲ್ಲಿ ಅವರಿಗಿದ್ದ ಕಥಾಕೀರ್ತನ ಸಾಹಿತ್ಯವೂ ಸಮೃದ್ಧವಾಗಿತ್ತು. ಇಷ್ಟೇ ಅಲ್ಲದೆ "ನರಹರಿ" ಎಂಬ ಅಂಕಿತದಿಂದ ತಾವೇ ಸ್ವತಃ ನೂರಾರು ದೇವರನಾಮಗಳನ್ನು, ಪದಪದ್ಯವನ್ನು ರಚಿಸಿದರು.

ಹರಿಕಥೆ ಕರ್ನಾಟಕದಲ್ಲಿ ಮಹಾರಾಷ್ಟ್ರದ ಪ್ರಭಾವದ ಪ್ರಭಾವಳಿಯಡಿ ಸಿಕ್ಕಿಹಾಕಿ ಕೊಂಡಿದ್ದಾಗ ಕನ್ನಡದಲ್ಲಿ ಅಪೂರ್ವವಾದ ಅನೇಕಾನೇಕ ಕಥೆಗಳನ್ನು ಧಾರಾಪುರದ ತಿಮ್ಮಪ್ಪದಾಸರು ಎನ್ನುವವರು ರಚಿಸಿದ್ದರು. ಕುಮಾರವ್ಯಾಸ ಭಾರತವನ್ನು ಅನುಸರಿಸಿ ಹರಿಕಥೆಯನ್ನು ರಚಿಸಿದ ಇವರು ಕನ್ನಡ ಕಾವ್ಯಗಳ ಮೂಲ ಶಕ್ತಿಯಿಂದಲೇ ಹರಿಕಥಾ ಕಲೆಯನ್ನು ಪ್ರಚಾರಪಡಿಸಿದರು. ವೇಣುಗೋಪಾಲದಾಸರ ಸೋದರಿ ವೆಂಕಮ್ಮನಿಗೆ ಈ ಎಲ್ಲ ಉಪಾಖ್ಯಾನಗಳು ಬಾಯಿಗೇ ಬರುತ್ತಿದ್ದು, ವೆಂಕಣ್ಣದಾಸರೂ ತಮ್ಮ ಹರಿಕಥೆಗಳಲ್ಲಿ ಇವುಗಳ ಸಮರ್ಥ ಪ್ರಯೋಗ ಮಾಡುತ್ತಿದ್ದುದರಿಂದ ವೇಣುಗೋಪಾಲದಾಸರು ಅವೆಲ್ಲವನ್ನು ಹೃದ್ಗತ ಮಾಡಿಕೊಳ್ಳುವುದು ಸಾಧ್ಯವಾಯಿತು. ಹಿಂದಿನ ಎಲ್ಲಾ ಮುಖ್ಯ ದೇವರನಾಮಗಳನ್ನು, ಹರಿದಾಸ ಸಾಹಿತ್ಯದ ಸಂಪ್ರದಾಯ ಗೀತೆಗಳನ್ನು ವೇಣುಗೋಪಾಲದಾಸರು ಸಂಗ್ರಹಿಸತೊಡಗಿದರು. ಹೀಗಾಗಿ ಆಗಿನಿಂದಲೂ ಅವರು ಶ್ರಮವಹಿಸಿ ಸಂಗ್ರಹಿಸಿರುವ ದಾಸಸಾಹಿತ್ಯ ಸಂಕೀರ್ತನ ಸಾಹಿತ್ಯದ ಅಮೂಲ್ಯ ಗ್ರಂಥಗಳು, ಹಸ್ತಪ್ರತಿಗಳು, ಹಳೆಯ ಪ್ರಕಟಣೆಗಳು ಇಂದಿಗೂ ಅವರ ಭಂಡಾರದಲ್ಲಿ ಸುರಕ್ಷಿತವಾಗಿವೆ.

ತುಮಕೂರಿನಲ್ಲಿ ವೇಣುಗೋಪಾಲದಾಸರ ಹರಿಕಥೆ ಅಪಾರ ಯಶಸ್ವಿಯಾದ ಸುದ್ದಿ ಇಡೀ ಜಿಲ್ಲೆಯಲ್ಲಿ ಕಾಡ್ಗಿಚ್ಚಿನಂತೆ ಹರಡಿತು. ಆ ಕಾಲದಲ್ಲಿ ಜನರಿಗಿದ್ದ ಪ್ರಧಾನ

ಮನರಂಜನೆ ಅದೊಂದೇ. ತಕ್ಷಣ ತಿಪಟೂರಿನ ಸಹೃದಯರು ಬಂದು ದಾಸರನ್ನು ಆಹ್ವಾನಿಸಿದರು. ತಿಪಟೂರಿನಲ್ಲಿ ಒಂದು ತಿಂಗಳ ಕಾಲ ಭರ್ಜರಿ 'ರಾಮಾಯಣ' ಕಥಾ ಪ್ರಸಾರವಾಯಿತು. ನಂತರ ಶಿರಾದ ಜನರು ಬಂದರು. ಅಲ್ಲಿ ಒಂದು ತಿಂಗಳು 'ರಾಮಾಯಣ'. ಒಂದೊಂದೇ ಊರುಗಳಲ್ಲಿರುವ ಜನ ಬಂದು ದಾಸರಿಗೆ ಮುಗಿಬೀಳತೊಡಗಿದರು. ಒಂದಾದ ಮೇಲೊಂದರಂತೆ ದಾಸರು ಒಂದೊಂದು ಊರಿನಲ್ಲಿಯೂ ತಿಂಗಳೊಪ್ಪತ್ತು ಇದ್ದು, ಕಡೆಗೆ ಹಳೆಯ ಮೈಸೂರು ಪ್ರಾಂತ್ಯದ ಎಲ್ಲಾ ಪ್ರಮುಖ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ರಾಮಾಯಣ ಕಥೆಯನ್ನು ಮಾಡುತ್ತಾ ಬಂದರು.

1930ರ ವೇಳೆಗೆ ಆರ್ಥಿಕವಾಗಿ ಸ್ವಲ್ಪ ಚೇತರಿಸಿಕೊಳ್ಳುತ್ತಿದ್ದ ವೇಣುಗೋಪಾಲ ದಾಸರು ತಮ್ಮ ದತ್ತು ತಂದೆಯ ಹಳೆಯ ಮನೆಯನ್ನು ಕೆಡವಿ ಹೊಸದಾಗಿ ಮನೆಯನ್ನು ಕಟ್ಟಿದರು. ತುಮಕೂರಿನ ಆಚಾರ್ಯರ ಬೀದಿಯಲ್ಲಿ ಈ ಮನೆ ಕಟ್ಟಿದ ಮೇಲೆ ಸ್ವಲ್ಪ ಸಮಾಧಾನವಾದರೂ ಮೂವರು ಮಕ್ಕಳನ್ನು ಬಿಟ್ಟು ಪತ್ನಿ ತೀರಿಕೊಂಡದ್ದು ಒಂದು ಹೊಡೆತವಾಯಿತು. ನಂತರ ಚನ್ನಪಟ್ಟಣದ ವೆಂಕಮ್ಮ ಎನ್ನುವವರ ಅಕ್ಕನ ಮಗಳಾದ ಶೇಷಮ್ಮ ಎನ್ನುವವರನ್ನು ಲಗ್ನವಾದರು.

ವೇಣುಗೋಪಾಲದಾಸರು ಹರಿಕಥಾ ಕಲೆಯನ್ನು ಅತ್ಯಂತ ಪರಿಣಾಮ ಕಾರಿಯಾಗಿ ಗ್ರಾಮೀಣ ಜನತೆಗೆ ಸ್ಪಂದಿಸುವಂತೆ ಮಾಡುತ್ತಾ ಹರಿಕಥಾ ಕ್ರಮದಲ್ಲೇ ಒಂದು ಶಿಷ್ಟ ಬದಲಾವಣೆ ತಂದರು. ಶಬ್ದದ ಉಚ್ಚಾರಣೆ, ಸಂಗೀತದ ಹಿತವಾದ ಸ್ವರಸಂಚಾರ, ಸಾಹಿತ್ಯಶುದ್ಧಿ, ಶ್ರುತಿಬದ್ಧತೆ ಹಾಗೂ ವಿಷಯದ ನೇರ ಪ್ರಸ್ತಾವನೆಯಿಂದಾಗಿ ವೇಣುಗೋಪಾಲದಾಸರು ತಮ್ಮದೇ ಆದ ವಿನೂತನ ಹರಿಕಥಾ ಶೈಲಿಯನ್ನು ರೂಢಿಸಿಕೊಂಡರು.

1937ರಲ್ಲಿ ದಾಸರು ಮೈಸೂರಿಗೆ ಆಗಮಿಸಿದರು. ಮೈಸೂರಿನ ಜನತೆಗೆ ದಾಸರನ್ನು ಕಾಣುವ, ಅವರ ಕಥೆ ಕೇಳುವ ಕುತೂಹಲ. ದಾಸರ ಜನಪ್ರಿಯತೆಯನ್ನು ಕೇಳಿದ ಮೈಸೂರಿನ ಜನತೆ 'ಮಹಾಭಾರತ' ಕಥೆಯನ್ನು ಕೇಳಬೇಕೆಂದು ಅಪೇಕ್ಷಿಸಿದರು. ಒಂದು ತಿಂಗಳ ಕಾಲಕ್ಕೆಂದು ಪ್ರಾರಂಭವಾದ 'ಮಹಾಭಾರತ' ಜನರ ಪ್ರಚಂಡ ಅಭಿಮಾನದ ಒತ್ತಾಯದಿಂದ ಆರು ತಿಂಗಳವರೆಗೂ ಮುಂದುವರೆಯಿತು. ಮೈಸೂರಿನ ಘನತೆವೆತ್ತಿದ್ದ ಹಿರಿಯ ವಿದ್ವಾಂಸರು, ಸಂಗೀತ ಕಲಾವಿಶಾರದರುಗಳು, ಕಲಾವಿದರುಗಳು ಪ್ರತಿನಿತ್ಯ ದಾಸರ ಹರಿಕಥೆಗೆ ತಪ್ಪದೆ ಬರುತ್ತಿದ್ದರು. ವೇಣುಗೋಪಾಲದಾಸರ ಹರಿಕಥಾ ವೈಖರಿ, ಸಂಗೀತ ಪ್ರಭುತ್ವ, ಭಾಷಾ ಪಟುತ್ವ,

ರಸಾಭಿಜ್ಞತೆ ಮೈಸೂರಿನ ವಿದ್ವಾಂಸರನ್ನು ಮೂಕವಿಸ್ಮಿತರನ್ನಾಗಿ ಮಾಡಿತು. ಆಗ ಕರ್ನಾಟಕ ಪ್ರಾಂತದಲ್ಲೆಲ್ಲಾ ಅತ್ಯಂತ ಸುಪ್ರಸಿದ್ಧರಾದ ಕೀರ್ತನಕಾರರಾಗಿದ್ದವರು ಇಬ್ಬರೇ. ಅವರೇ ಸೋಸಲೆ ರಾಮದಾಸರು ಹಾಗೂ ಬೇಲೂರು ಕೇಶವದಾಸರು. ಅವರಿಬ್ಬರೂ ಪ್ರತಿನಿತ್ಯವೂ ದಾಸರ ಹರಿಕಥೆಗೆ ಬಂದು "ಮುಂದೆ ನಮ್ಮ ಹರಿದಾಸ ಪರಂಪರೆಯ ಹೆಸರುಳಿಸಬಲ್ಲ ದಾಸರೆಂದರೆ ನೀವೇ" ಎಂದು ತುಂಬು ಸಂತೋಷದಿಂದ ಆನಂದಬಾಷ್ಪ ಸುರಿಸುತ್ತಾ ಹಾರೈಸಿದರು.

'ಮಹಾಭಾರತ' ಕಥೆಯಿಂದ ಪ್ರಭಾವಿತರಾಗಿದ್ದ ಮೈಸೂರಿನ ಸಹೃದಯರು, ದಾಸರು ತುಮಕೂರಿಗೆ ಹಿಂತಿರುಗುತ್ತೇನೆಂದು ನಿರ್ಧಾರ ಮಾಡಿ ಹೇಳಿದ ಕೂಡಲೆಯೇ, ಮೈಸೂರಿನ ರಾಜಮನೆತನದ ಅರಸುಗಳಿಗೆ ಸೇರಿದ 'ಗೋಪಾಲಕೃಷ್ಣ ದೇವಸ್ಥಾನ'ದಲ್ಲಿ 'ಶ್ರೀ ಮದ್ರಾಮಾಯಣ' ಹರಿಕಥೆ ಏರ್ಪಾಟು ಮಾಡಿದರು. 'ಮಹಾಭಾರತಕ್ಕಿಂತ ರಾಮಾಯಣ' 'ರಾಮಾಯಣಕ್ಕಿಂತ ಮಹಾಭಾರತ' ಎನ್ನುವಂತಹ ಅನುಭವ ಮೈಸೂರಿನ ಕಲಾರಸಿಕರಿಗಾಯಿತು. 'ರಾಮಾಯಣ'ದ ಹರಿಕಥೆಯ ಮಂಗಳ ಕಾರ್ಯಕ್ರಮ ಮೈಸೂರಿನ ಸಂಗೀತ, ಸಾಹಿತ್ಯ ಹಾಗೂ ವೈದಿಕ ವಿದ್ವಾಂಸರಿಂದ ತುಂಬಿತುಳುಕಾಡುತ್ತಿತ್ತು. ಆಗ ಆಳುತ್ತಿದ್ದ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ವೇಣುಗೋಪಾಲದಾಸರ ಪ್ರಚಂಡ ಜನಪ್ರಿಯತೆಯನ್ನು ಕೇಳಿ ಸ್ವಯಂ ತಾವೇ ಮಂಗಳ ಕಾರ್ಯಕ್ರಮಕ್ಕೆ ಆಗಮಿಸಿ ಅಧ್ಯಕ್ಷತೆ ವಹಿಸಿದರು. ಸಂಗೀತ ಕಲಾಶ್ರೀಮಂತಿಕೆಯಿಂದ, ಹರಿದಾಸ ಶೋಭೆಯಿಂದ, ಸಕಲ ಸಂಕೀರ್ತನ ಸಲ್ಲಕ್ಷಣಗಳಿಂದ ಕಂಗೊಳಿಸುತ್ತಿದ್ದ ವೇಣುಗೋಪಾಲದಾಸರನ್ನು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಮನದಣಿಯ ಕೊಂಡಾಡಿದರು. ಆಸ್ಥಾನದ ವಿದ್ವಾಂಸರು ಒಬ್ಬೊಬ್ಬರೂ ದಾಸರನ್ನು ಗಾನಗಂಧರ್ವರೆಂದೂ, ಕಥಾಕೇಸರಿಯೆಂದೂ ತುಂಬುಹೃದಯದಿಂದ ಶ್ಲಾಘಿಸಿದರು. ಸಮಸ್ತ ವಿದ್ವನ್ಮಣಿಗಳು, ಮೈಸೂರು ನಗರದ ಮಹಾಜನತೆ ಕಿಕ್ಕಿರಿದಿದ್ದ ಆ ತುಂಬು ಸಭೆಯ ಆ ಮಂಗಳದ ದಿನ ನಾಲ್ವಡಿ ಕೃಷ್ಣರಾಜ ಒಡೆಯರ ಪರವಾಗಿ ವೇಣುಗೋಪಾಲದಾಸರಿಗೆ ವಜ್ರಖಚಿತ ಬಂಗಾರದ ತೋಡಾವನ್ನು ತೊಡಿಸಲಾಯಿತು. ತಿಂಗಳುಗಳ ಕಾಲ ಹರಿಕಥೆ ಕೇಳಿದ್ದ ಸಾರ್ವಜನಿಕ ಸಹೃದಯರೆಲ್ಲಾ ಸೇರಿ ಭಕ್ತಿ ಗೌರವದಿಂದ ದಾಸರಿಗೆ ಮೂರು ತೊಲ ಗಟ್ಟಿ ಬಂಗಾರದ ಪಾರಿತೋಷಕವನ್ನು ಸಮರ್ಪಿಸಿ ಅಭಿನಂದಿಸಿದರು. ಮಹಾರಾಜರ ಬಂಗಾರದ ತೋಡಾವನ್ನು ಹಾಗೂ ಮಹಾಜನತೆಯ ಬಂಗಾರದ ಪಾರಿತೋಷಕವನ್ನು ಸ್ವೀಕರಿಸಿದ ದಾಸರು ಈ ಗೌರವಕ್ಕೆ ಉತ್ತರವಾಗಿ "ಬಂಗಾರದ ವಜ್ರವೈಢೂರ್ಯ ಮತ್ತು ರತ್ನಗಳನ್ನು ತೃಣಸಮಾನ ಕಂಡು, ಅವೆಲ್ಲವನ್ನು ಬಿಟ್ಟು ಗೆಜ್ಜೆಕಟ್ಟಿ ಲಜ್ಜೆಬಿಟ್ಟು

ಹೆಜ್ಜೆಹಾಕುತ್ತಾ ಜೋಳಿಗೆ ಹಾಕಿಕೊಂಡು "ಮಧುಕರವೃತ್ತಿ ಎನ್ನದು ಅದು ಬಲು ಚೆನ್ನದು" ಎನ್ನುತ್ತಾ ಭಿಕ್ಷಕ್ಕೆ ಹೋಗುವುದನ್ನು ದಾಸರು ನನಗೆ ಕಲಿಸಿದ್ದಾರೆ. ಇದರ ತಾತ್ಪರ್ಯವನ್ನು ಸಂಪೂರ್ಣ ತಿಳಿದು, ಅದನ್ನು ಗಮನದಲ್ಲಿಟ್ಟುಕೊಂಡು ತಾವು ವಿಶ್ವಾಸದಿಂದ ನೀಡುತ್ತಿರುವ ಈ ಗೌರವವನ್ನು ಸ್ವೀಕರಿಸುತ್ತಿದ್ದೇನೆ" ಎಂದು ನುಡಿದರು.

ಆಗ ಜವಾಬ್ದಾರೀ ಸರ್ಕಾರದ ಬೇಡಿಕೆಗಾಗಿ ಮೈಸೂರಿನಲ್ಲಿ ಭಯಂಕರವಾದ ಚಳುವಳಿ ಎಲ್ಲೆಡೆಯೂ ಉಲ್ಬಣಿಸಿದ ಸಮಯ. 1946–47ರ ಈ ಚಳುವಳಿ ಬೆಂಗಳೂರಿನಿಂದ ಮೈಸೂರಿಗೂ ವ್ಯಾಪಿಸಿತ್ತು. ಮೈಸೂರಿನಲ್ಲಿ 'ಕಂಡಲ್ಲಿ ಗುಂಡು' ಹಾಗೂ 'ಕರ್ಫ್ಯೂ ಆಜ್ಞೆ' ಜಾರಿಯಲ್ಲಿತ್ತು. ವೇಣುಗೋಪಾಲದಾಸರ ಹರಿಕಥೆ ಅತ್ಯಂತ ರಸವತ್ತಾದ ಘಟ್ಟದಲ್ಲಿದ್ದರಿಂದ, ಹರಿಕಥೆಗೆ ಬರುತ್ತಿದ್ದ ಆಸ್ತಿಕ ವೃಂದವೆಲ್ಲಾ ಹರಿಕಥೆ ನಿಲ್ಲಿಸಬೇಡಿರೆಂದು ದಾಸರನ್ನು ಪ್ರಾರ್ಥಿಸಿದರು.

ಎಲ್ಲ ಶ್ರೋತೃಗಳ ಆಗ್ರಹದ ಆಶಯದಂತೆ ವೇಣುಗೋಪಾಲದಾಸರು ಕರ್ಫ್ಯೂ ಆದರೂ ಹರಿಕಥೆ ಮಾಡಲು ನಿರ್ಧರಿಸಿ ಮುಂದುವರೆಸಿದರು. ಜನ ಒಬ್ಬೊಬ್ಬರಾಗಿ ಸಣ್ಣಸಣ್ಣ ಗಲ್ಲಿಗಳ ಮೂಲಕ ಹೇಗೋ ಬಂದು ತಲುಪಿ, ಸಂಜೆ ಆರು ಘಂಟೆಗೆ ಸಭಾಂಗಣ ತುಂಬಿ ತುಳುಕುತ್ತಿತ್ತು. ಮರುದಿನ ಯಾರೋ ಒಬ್ಬರು ಕಿಡಿಗೇಡಿಗಳು ಇಡೀ ನಗರ ಉರಿಯುತ್ತಿರುವಾಗ ಇಲ್ಲೇನು ಹರಿಕಥೆ ಎಂದು ಕುಯುಕ್ತಿಯಿಂದ ಮಿಲಿಟರಿ ಅಧಿಕಾರಿಗಳಿಗೆ ದೂರಿತ್ತು, ಇಲ್ಲಿ ಆಗುತ್ತಿರುವ ಕಾನೂನು ಉಲ್ಲಂಘನೆಯನ್ನು ತಪ್ಪಿಸಬೇಕೆಂದು ಕರೆಯಿತ್ತರು. ಮರುದಿನ ಸಂಜೆ ಏಳು ಘಂಟೆ, ಶ್ರೋತೃಗಳೆಲ್ಲಾ ಬಂದು ಕಥೆ ಕೇಳುವುದರಲ್ಲಿ ತಲ್ಲೀನರಾಗಿದ್ದಾರೆ. ಅಷ್ಟರಲ್ಲಿ ಆಚೆಯಿಂದ ಬಂದೂಕುಧಾರಿ ಮಿಲಿಟರಿ ಜನ ಬಂದರು. ಅವರ ಕ್ಯಾಪ್ಟನ್ನನು ಹೊರಬಾಗಿಲು ಬಳಿಯ ಕಟ್ಟೆಗೊರಗಿ ನಿಂತು ಒಳಗಿನ ದೃಶ್ಯ ನೋಡತೊಡಗಿದ.

ಒಳಗಡೆ ನಿರಾತಂಕ ಹರಿಕಥೆ ಸಾಗಿದೆ. ಕ್ಯಾಪ್ಟನ್ನನು ನೋಡುತ್ತಾ ನಿಂತ. ಸುಂದರಮುಖದ ತೇಜಸ್ವೀ ದಾಸರೊಬ್ಬರು ನಿರರ್ಗಳ ವಾಕ್ಪ್ರವಾಹದ ಧಾರೆ ಹರಿಸುತ್ತಿದ್ದಾರೆ. ಅವರ ಗಾನದ ಮೋಡಿಗೆ, ಮಾತಿನ ರೀತಿಗೆ ಮರುಳಾಗಿ ಕುಳಿತಿರುವ ಶ್ರೋತೃವೃಂದ. ರಾಮಾಯಣ ಭಾರತದ ವಿವಿಧ ಪ್ರಸಂಗಗಳ ಧಾರೆಧಾರೆ. ತಮ್ಮ ಕಥಾನಿರೂಪಣೆಯಲ್ಲಿ ನೀತಿಬೋಧೆ, ಮಾತುಮಾತಿಗೆ ಹರಿದಾಸರ ಹಾಡುಗಳು, ಕುಳಿತವರ ಬುದ್ಧಿ ಹೃದಯಗಳಿಗೆ ವಿವೇಕದ ಕಸಿ; ಆಚೆ ಭೀಕರ ಕರ್ಫ್ಯೂ ಇದ್ದರೂ ಅದನ್ನು ಮರೆತು ಕೂತಿರುವ ಶ್ರೋತೃವೃಂದ.

ಕಥೆ ಮುಗಿಯಿತು. ಮುಗಿದೊಡನೆಯೇ ಆ ಕ್ಯಾಪ್ಟನ್‌ಸಾಹೇಬನು ತನ್ನ ಉಳಿದ ಅಧಿಕಾರಿಗಳೊಂದಿಗೆ ಒಳಗೆ ಬರತೊಡಗಿದ. ದೂರು ಕೊಟ್ಟಿದ್ದವರು ದೂರದಿಂದಲೇ ಬಗ್ಗಿ ನೋಡುತ್ತಿದ್ದು ಈಗ ದಾಸರ ಬಂಧನವಾಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದರು. ಅವನು ಬಂದವನೇ ದಾಸರ ಎದುರು ನಿಂತ. ಜನರಿಗೆ ತಬ್ಬಿಬ್ಬಾಯಿತು. ಪರಿಸ್ಥಿತಿಯ ಅರ್ಥವಾದರೂ ದಾಸರು ಅಂಜಲಿಲ್ಲ, ಅಳುಕಲಿಲ್ಲ. ಕರ್ಫ್ಯೂ ಆಜ್ಞೆಯ ಉಲ್ಲಂಘನೆಯ ಶಿಕ್ಷೆ ತೀವ್ರವೇ ಇರಬೇಕೆಂದು ದೂರು ಕೊಟ್ಟವರ ಲೆಕ್ಕಾಚಾರ.

ಎಲ್ಲರೂ ನೋಡುತ್ತಿದ್ದಂತೆಯೇ ಕರ್ಫ್ಯೂ ಜವಾಬ್ದಾರಿಯ ಅಧಿಕಾರಿ ವೇಣುಗೋಪಾಲದಾಸರಿಗೆ ನಮಸ್ಕರಿಸಿದ. ಅಷ್ಟೇ ಅಲ್ಲದೆ, ಇಂತಹ ಹರಿಕಥಾ ಕಾರ್ಯಕ್ರಮದಿಂದ ಹಿಂಸಾಚಾರ ತಗ್ಗಿ, ಸುಸಂಸ್ಕೃತ ಜನರು ಹೆಚ್ಚುತ್ತಾರೆ, ಅತ್ಯಂತ ಶಾಂತಿಪ್ರಿಯವಾದ ಇಂತಹ ಉತ್ತಮ ಕೆಲಸಕ್ಕೆ ಯಾವ ರೀತಿಯ ಆತಂಕ ಅಡ್ಡಿಗಳನ್ನು ಉಂಟುಮಾಡುವುದಿಲ್ಲವೆಂದು ಹೇಳಿ ದಾಸರಿಗೆ ಮತ್ತೊಮ್ಮೆ ಅಭಿನಂದಿಸಿ ತೆರಳಿದ.

ದಾಸರು ಮೈಸೂರಿನಲ್ಲಿ ಅರಮನೆಗೆ ಸೇರಿದ ಗೋಪಾಲಕೃಷ್ಣ ಮಂದಿರದಲ್ಲಿ ಹರಿಕಥೆ ಮಾಡುತ್ತಿದ್ದರು. ಅರಮನೆಯ ಹರಿಕಥೆಯಾದುದರಿಂದ ದರ್ಬಾರ್ ಭಕ್ಷಿ ಮೊದಲಾದ ಅರಮನೆಯ ಎಲ್ಲಾ ಅಧಿಕಾರಿಗಳು ದಿನವೂ ಬರುತ್ತಿದ್ದರು. ಅರಸುಗಳ ದೇವಾಲಯದ ಈ ಸ್ಥಳದಲ್ಲಿ ಅರಸು ಮನೆತನದ ಸ್ತ್ರೀಯರುಗಳು ಪ್ರತ್ಯೇಕವಾಗಿ ಘೋಷಾದೊಳಗೆ ಕುಳಿತುಕೊಳ್ಳುವ ವ್ಯವಸ್ಥೆ, ಮಹಾರಾಜರಿಗೇ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಲಾಗಿತ್ತು. ತಮ್ಮ ಕೋಣೆಯಲ್ಲೇ ಕುಳಿತು ಮಹಾರಾಜರು ಹರಿಕಥೆಯನ್ನು ಕೇಳುತ್ತಾ ತಲೆದೂಗುತ್ತಿದ್ದಾರೆ. ದಾಸರು ಹರಿಕಥೆಯನ್ನು ಎಷ್ಟು ತಲ್ಲೀನರಾಗಿ ಹೇಳುತ್ತಿದ್ದರೆಂದರೆ ಕನಕದಾಸರ ಒಂದು ಹಾಡು ಹೇಳುತ್ತಾ 'ರಾಜನಾಗಿ ಮೆರೆಯುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ' ಎಂದು ಹೇಳಿಬಿಟ್ಟರು. ತಕ್ಷಣ ಕಕ್ಕಾಬಿಕ್ಕಿಯಾದ ದರ್ಬಾರ್ ಭಕ್ಷಿಗಳು, ಮಹಾರಾಜರು ಇದನ್ನು ಕೇಳುತ್ತಿರುವುದರಿಂದ ರಾಜರ ದೃಷ್ಟಿಯಲ್ಲಿ ಇದು ಆಕ್ಷೇಪಣೀಯವಾಗ ಬಹುದಾದ್ದರಿಂದ, ಇನ್ನೇನು ಈಗಲೋ ಆಗಲೋ ದಾಸರಿಗೆ ಬುಲಾವ್ ಬರಬಹುದೆಂದು ನಿರೀಕ್ಷಿಸುತ್ತಿದ್ದರು. ಕಥೆಯೆಲ್ಲಾ ಮುಗಿದ ಮೇಲೆ ಮಹಾರಾಜರು ದಾಸರ ವಸ್ತುನಿಷ್ಠ ಸತ್ಯಾಭಿವ್ಯಕ್ತಿಗಾಗಿ ಹಾಗೂ ಮುಖನೋಡಿ ಕಥೆ ಮಾಡುವ ರೀತಿ ಇಲ್ಲದ ಶ್ರೇಷ್ಠಗುಣಮಟ್ಟಕ್ಕಾಗಿ ದಾಸರನ್ನು ಹೃತ್ಪೂರ್ವಕ ಅಭಿನಂದಿಸಿ, ಮುಕ್ತಕಂಠದಿಂದ ಪ್ರಶಂಸಿಸಿ ಸನ್ಮಾನ ಮಾಡಿದರು.

ಮಹಾರಾಜರೇ ದಾಸರನ್ನು ಇಷ್ಟೊಂದು ಮುಕ್ತಕಂಠದಿಂದ ಮೆಚ್ಚಿರುವುದನ್ನು ಕಂಡ ದಿವಾನರು ಹಾಗೂ ಅರಮನೆಯ ದರ್ಬಾರ್ ಭಕ್ತಿಗಳು ಅರಮನೆಯ ಒಳಗೇ ವೇಣುಗೋಪಾಲದಾಸರ ಹರಿಕಥೆಯಾಗಬೇಕೆಂದು ಅಪೇಕ್ಷಿಸಿದರು. ಆದರೆ ದರ್ಬಾರಿನಲ್ಲಿ ಹರಿಕಥೆ ಮಾಡಬೇಕಾದರೆ ದರ್ಬಾರ್ ಉಡುಪಿನಲ್ಲೇ ಹೋಗಬೇಕಿತ್ತು. ದಾಸರು ಮುಚ್ಚುಮರೆಯಿಲ್ಲದೆ ಬಿಚ್ಚು ಮಾತಿನಲ್ಲಿ ಸ್ಪಷ್ಟವಾಗಿ ತಾವು ದರ್ಬಾರ್ ಉಡುಪಿನಲ್ಲಿ ಪ್ಯಾಂಟ್ ಧರಿಸಿ ಹರಿಕಥೆ ಮಾಡುವುದಿಲ್ಲವೆಂದು ಹೇಳಿ ಅರಮನೆಯ ಆಮಂತ್ರಣವನ್ನೇ ನಿರಾಕರಿಸಿದರು. ರಾಜ್ಯದ ಉಳಿದೆಲ್ಲ ಕೀರ್ತನಕಾರರು, ಅರಮನೆಯ ಆಮಂತ್ರಣವನ್ನೇ ಬೇಡವೆಂದು ನಿರಾಕರಿಸಿದ ದಾಸರ ಧೈರ್ಯವನ್ನು ನೋಡಿ ಮೂಗಿನ ಮೇಲೆ ಬೆರಳಿಟ್ಟರು.

ಮೈಸೂರಿನಲ್ಲಿ ಮಹಾಭಾರತ, ರಾಮಾಯಣ, ಯಾವುದೇ ಹರಿಕಥೆಯನ್ನು ಮಾಡಿದರೆ, ಕಥಾಸರಣಿ ಮುಗಿದು ಕಡೆಯ ದಿನ ಅದ್ದೂರಿಯ ಮಂಗಳ ಸಮಾರಂಭವೇರ್ಪಡುತ್ತಿತ್ತು. ಮೈಸೂರಿನಲ್ಲಿದ್ದ ಮೂರು ಬೃಹತ್ ಕಲ್ಯಾಣ ಮಂಟಪಗಳನ್ನು ಮಂಗಳದ ದಿನಕ್ಕಾಗಿ ಕಾಯ್ದಿರಿಸುತ್ತಿದ್ದ ವ್ಯವಸ್ಥಾಪಕರು, ಈ ಛತ್ರಗಳಲ್ಲಿ ಮಂಗಳದ ದಿನ ಎಲ್ಲರಿಗೂ ಮೃಷ್ಟಾನ್ನ ಭೋಜನದ ವ್ಯವಸ್ಥೆ ಮಾಡುತ್ತಿದ್ದರು. ಮಂಗಳದ ದಿನಕ್ಕಾಗಿ ತರುತ್ತಿದ್ದ ತರಕಾರಿಗಳನ್ನು ಹಾಗೂ ಮಂಗಳದ ದಿನ ಭಕ್ತಾದಿಗಳು ನೀಡಿದ ಆದರದ ಪದಾರ್ಥಗಳನ್ನು ಎಷ್ಟು ರಾಶಿರಾಶಿ ಇಡುತ್ತಿದ್ದರೆಂದರೆ ಅವುಗಳದೇ ಒಂದು ವಸ್ತುಪ್ರದರ್ಶನವನ್ನು ಏರ್ಪಡಿಸುತ್ತಿದ್ದರು. ಒಂದು ಹರಿಕಥೆಯ ಮಂಗಳವಾದರೆ ದಾಸರಿಗೆ ಕನಿಷ್ಠ ಎರಡು ಸಾವಿರ ಪಂಚೆಗಳು, ಅವರ ಪತ್ನಿಯವರಿಗೆ ಎರಡು ಸಾವಿರ ಸೀರೆಗಳು ಭಕ್ತಾದಿಗಳಿಂದ ಸಮರ್ಪಿಸಲ್ಪಡುತ್ತಿದ್ದವು. ಒಮ್ಮೆ 'ರಾಮಾಯಣ' ಕಥೆಯ ಮಂಗಳವಾದಾಗ ದಾಸರಿಗೆ ಅಭಿಮಾನಿಗಳಿಂದ ಬಂದ ಬಂಗಾರದ ಉಂಗುರಗಳನ್ನು ಅಳೆಯುವ ಪಾವಿನಲ್ಲಿ ಅಳೆಯಲಾಯಿತಂತೆ. ಮಂಗಳ ಮುಗಿದ ಮೇಲೆ ಭಕ್ತಾದಿಗಳು ಮೂರು ಘಟಿಗಳ ಕಾಲ ಸತತವಾಗಿ ಸಾಲು ನಿಂತು ದಾಸರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಆಶೀರ್ವಾದ ಪಡೆದು ಹೋಗುತ್ತಿದ್ದರಂತೆ.

ವೇಣುಗೋಪಾಲದಾಸರ ಹರಿಕಥೆ ಅಷ್ಟೊಂದು ಪ್ರಸಿದ್ಧವಾಗಲು ಇನ್ನೊಂದು ಕಾರಣವೆಂದರೆ ಹರಿದಾಸರ ದೇವರನಾಮಗಳಿಗೆ ಅವರೇ ಸ್ವರಪ್ರಸ್ತಾರ ಹಾಕಿ ಅಪೂರ್ವ ರೀತಿಯಲ್ಲಿ ಸಂಗೀತ ಸಾಹಿತ್ಯಗಳ ಅದ್ಭುತ ಸಹಸ್ಪಂದನ ಮಾಡಿ ಹರಿಕಥೆ ಮಾಡುವ ಸಂಪ್ರದಾಯ. ಹರಿಕಥೆಗಾಗಿಯೇ ದಾಸರುಗಳು ದೇವರನಾಮಗಳನ್ನು ಬರೆದರೇನೋ ಎನ್ನುವಂತೆ ವೇಣುಗೋಪಾಲದಾಸರು ಹಾಡುಗಳನ್ನು ಸಂಯೋಜಿಸುತ್ತಿದ್ದರು. ಅವರ

ಹರಿಕಥೆಯ ಜನಪ್ರಿಯತೆಯ ಇನ್ನೂ ಒಂದು ಕಾರಣವೆಂದರೆ ಅವರ ಕಲಾತ್ಮಕ ಅಭಿನಯ ಅಥವಾ ಭಾವಪೂರ್ಣ ಅಭಿವ್ಯಕ್ತಿ. ಚಿಕ್ಕವಯಸ್ಸಿನಲ್ಲಿ ವೇಣುಗೋಪಾಲ ದಾಸರು ನಾಟಕ ಕಂಪನಿಗಳಲ್ಲಿ ಬಣ್ಣ ಬಳಿದು ನಾಟಕ ಮಾಡಿದ್ದೂ ಉಂಟು. ಪಾತ್ರಪೋಷಣೆಯಲ್ಲಿ, ಹಾಡುಗಾರಿಕೆಯಲ್ಲಿ ಒಳ್ಳೆಯ ರೀವಿಯಿತ್ತು. ಹಾಡುತ್ತಿದ್ದ ಹಾಡಿನಲ್ಲಿ, ಹೊರಬೀಳುತ್ತಿದ್ದ ರಾಗಗಳಲ್ಲಿ ಹಾಗೂ ಸ್ವರಗಳಲ್ಲಿ ಕಲಾಕೌಶಲ್ಯ ತುಂಬಿ ತುಳುಕುತ್ತಿತ್ತು. ಹೀಗಾಗಿ ಹರಿಕಥೆ ಮಾಡುವಾಗ ದಾಸರ ತಾದಾತ್ಮ್ಯ ಎಷ್ಟಿರುತ್ತಿದ್ದೆಂದರೆ ತಾವೇ ಆ ಪಾತ್ರವಾಗಿ ಭೋರ್ಗರೆಯುತ್ತಿದ್ದರು. ಜನರೆಲ್ಲರ ಕರುಳು ಕಿತ್ತು ಹೃದಯ ಹಿಂಡಿ ಕಣ್ಣೀರ ಕಾಲುವೆ ಹರಿಯುವಷ್ಟು ಭಾವಪರವಶರಾಗಿ ಅಳುಕುತ್ತಲೇ ಕಥೆ ಮುಂದುವರೆಸುವ ಸಾಮರ್ಥ್ಯವಿತ್ತು. ಉತ್ಕೃಷ್ಟವಾದ ಶಾರೀರ ಸಂಪತ್ತು, ಶುದ್ಧ ನಾದಲಯ ಜ್ಞಾನ, ಸಾಹಿತ್ಯದಲ್ಲಿ ಪರಿಶ್ರಮ, ಸಂಪ್ರದಾಯದ ಹಿರಿಮೆ, ದಾಸರವೇಣ್ಯರುಗಳ ಅನುಗ್ರಹ, ಸಂಸ್ಕೃತಿಯನ್ನು ಪ್ರಸರಿಸುವ ಮನಮೋಹಕ ನಿಲುವು, ಕಂಚಿನ ಕಂಠ, ತುಂಬುಕೆನ್ನೆಯ ದಿಟ್ಟಮುಖ ಇವೆಲ್ಲವುಗಳ ಸಾಕಾರ ಮೂರ್ತಿಯಾಗಿದ್ದರು ಹರಿದಾಸರತ್ನ ವೇಣುಗೋಪಾಲದಾಸರು.

ದಾಸರ ಹರಿಕಥೆಗಳಿಗೆ ಜನಸಮುದಾಯದ ಪ್ರಚಂಡ ಆಕರ್ಷಣೆಗೆ ದಾಸರ ಭಗವದ್ಭಕ್ತಿಯೂ ಮುಖ್ಯ ಕಾರಣ. ವೇಣುಗೋಪಾಲದಾಸರಿಗೆ ಭಕ್ತಿ ಅವರ ಹರಿಕಥೆಗಳ ಕೇಂದ್ರ ಬಿಂದು. ಸಿಂಧುಶಯನನತ್ತ ಜನತೆಯನ್ನು ಕರೆದೊಯ್ಯುವಲ್ಲಿ ತಮ್ಮ ಸೇವೆ ಬಿಂದುಗಂಗೋದಕ ಮಾತ್ರ ಎಂಬ ನಂಬಿಕೆ ಅವರದು. ಎಂದೆಂದಿಗೂ ಇಂದಿರಾರಮಣ ಬಂದೊದಗುವನೆಂಬ ವಿಶ್ವಾಸವನ್ನು ಹರಿಕಥೆಗಳ ಮೂಲಕ ಜನಮನದಲ್ಲಿ ಬಿತ್ತಿದರು. ಆದರೆ ಅವರ ಭಕ್ತಿಯ ವೈಶಿಷ್ಟ್ಯ ಕೇವಲ ಅವರು ಭಕ್ತಿಯನ್ನು ಬೋಧಿಸುವುದರಲ್ಲಿ ಮಾತ್ರ ಇರಲಿಲ್ಲ. ಭಗವಂತನಲ್ಲಿ, ರಾಘವೇಂದ್ರಸ್ವಾಮಿಗಳಲ್ಲಿ ಸದಾಕಾಲ ಅನನ್ಯಭಕ್ತಿಯನ್ನು ಪ್ರದರ್ಶಿಸುತ್ತಿದ್ದರು.

1957ರಲ್ಲಿ ಅವರಿಗೆ ಆಸನಫಣಿ ಎಂಬ ವಿಚಿತ್ರ ರೋಗ ಪ್ರಾಪ್ತವಾಯಿತು. ಅದು ಬೆನ್ನುಫಣಿಯಷ್ಟೇ ಭೀಕರ ಖಾಯಿಲೆ. ಆಸನ ಪ್ರದೇಶದಲ್ಲಿ ಊತವಾದ ಗಡ್ಡೆ ಯಾವ ಔಷಧಿ ಉಪಚಾರಗಳಿಂದಲೂ ಒಡೆಯಲಿಲ್ಲ. ನೋವು ದಿನದಿಂದ ದಿನಕ್ಕೆ ಉಲ್ಬಣವಾಗತೊಡಗಿತ್ತು. ಕಡೆಗೆ ನೋವು ತಡೆಯಲಾಗದಷ್ಟು ಪ್ರಬಲಿಸಿದಾಗ ಅರಮನೆಯ ರಾಜವೈದ್ಯರಾಗಿದ್ದ ಚಂದ್ರ ಭಾನುಸಿಂಗ್ ಅವರು ವಜ್ರವನ್ನು ಅರೆದು ಕಟ್ಟಿದರು. ರಾತ್ರಿ ದಾಸರು ರಾಘವೇಂದ್ರಸ್ವಾಮಿಗಳ ಭಾವಚಿತ್ರ ಬರೆದು ತಮ್ಮ ಪತ್ನಿಯ ಮಾಂಗಲ್ಯವನ್ನು ಉಳಿಸಬೇಕಾದ್ದು ನೀವೇ ಎಂದು ಭಕ್ತಿಯುದ್ರೇಕದಿಂದ ಅತ್ತು ಒಂದು ನಿರ್ಧಾರಕ್ಕೆ ಬಂದರು. ಅರ್ಧರಾತ್ರಿಯ ಮೇಲೆ ಜೊಂಪು

ಹತ್ತಿದಂತಾಯಿತು. ಬೆಳಿಗ್ಗೆ ಏಳುವಷ್ಟರಲ್ಲಿ ಗಡ್ಡೆ ಒಡೆದಿತ್ತು. ರಕ್ತದ ಮಡು ನಿಂತಿತ್ತು. ನೋವು ಇಳಿದಿತ್ತು. ಮಾಂಗಲ್ಯ ಉಳಿದಿತ್ತು. ಎಲ್ಲರ ಮುಖದಲ್ಲೂ ಸಂತಸದ ಗೆರೆ ಸುಳಿದಿತ್ತು.

ವೇಣುಗೋಪಾಲದಾಸರು ರಾಮಾಯಣ, ಮಹಾಭಾರತ, ಭಾಗವತ ಮೂಲ ಕೃತಿಗಳನ್ನು, ಟೀಕಾಟಿಪ್ಪಣಿ ವ್ಯಾಖ್ಯಾನ ಸಹಿತ ಕರ್ನಾಟಕ ಹರಿದಾಸರ ಕೃತಿಗಳನ್ನು ಸಂದರ್ಭೋಚಿತವಾಗಿ ಸಮನ್ವಯ ಮಾಡಿಕೊಂಡು, ಹರಿಕಥಾ ಕಲೆಯಲ್ಲಿ ದಿಗ್ವಿಜಯ ಸಾಧಿಸುತ್ತಿರುವುದನ್ನು ಕಂಡ ಅನೇಕರು ದಾಸರ ಶಿಷ್ಯತ್ವ ವಹಿಸಲು ಮುಂದಾದರು. ಇವರಲ್ಲಿ ಪ್ರಮುಖರೆಂದರೆ ಮೈಸೂರಿನ ದಿ: ಶಾಮಣ್ಣನವರು, ಪ್ರಭಾತ್ ಸಂಸ್ಥೆಗಳ ನೇತಾರ ಟಿ.ವಿ. ಗೋಪೀನಾಥದಾಸರು, ಶ್ರೀ ಟಿ.ವಿ. ಜಯಸಿಂಹದಾಸರು, ರಾಘವೇಂದ್ರಚಾರ್ಯರು, ಮಂಡ್ಯದ ಎಂ.ಆರ್. ಗುರುರಾಜದಾಸರು, ಹಾಗೂ ದಾಸರ ಸ್ವಯಂಪುತ್ರ ಟಿ.ವಿ. ಗುರುರಾಜದಾಸರು. ಹಂಡೆ ಗುರು ವೇದವ್ಯಾಸ ದಾಸರಂತಹ ರಾಜ್ಯಪ್ರಶಸ್ತಿ ವಿಜೇತರೂ ಸಹ ನಾಲ್ಕು ದಶಕಗಳಿಂದಲೂ ವೇಣುಗೋಪಾಲದಾಸರಿಂದ ಕಥಾಕೀರ್ತನೆಯನ್ನು ಕುರಿತಾದ ಅನೇಕ ಸಲಹೆಗಳನ್ನು ಪಡೆಯುತ್ತಾ, ದಾಸರ ಕೈಬರಹದ ಪ್ರತಿಗಳ ಸಾಹಿತ್ಯಾವಲೋಕನ ಮಾಡಿ, ತಾವೂ ಅದನ್ನು ಸಂಗ್ರಹಿಸಿ, ಹರಿಕಥಾ ಕಲೆಯ ಸಿದ್ಧಿಸಾಧನೆಗಳಲ್ಲಿ ದಾಸರೊಂದಿಗೆ ಸುಖದುಃಖಗಳನ್ನು ಹಂಚಿಕೊಂಡಿದ್ದಾರೆ.

ವೇಣುಗೋಪಾಲದಾಸರ ಅಣ್ಣ ವೆಂಕಣ್ಣದಾಸರ ಪುತ್ರರೇ ಗೋಪೀನಾಥ ದಾಸರು. ಮೈಸೂರಿನಿಂದ ವೇಣುಗೋಪಾಲದಾಸರು ಬೆಂಗಳೂರಿಗೆ ಬಂದು ನೆಲಸಿದುದು ಗೋಪೀನಾಥದಾಸರ ದೃಷ್ಟಿಯಲ್ಲಿ ಬೆಳಕಿನ ಬೆಟ್ಟವೇ ತಮ್ಮ ಮುಂದೆ ಬಂದು ನಿಂತಂತಾಯಿತು. ವೇಣುಗೋಪಾಲದಾಸರಲ್ಲಿ ಗೋಪೀನಾಥದಾಸರು ಮೊಟ್ಟಮೊದಲಿಗೆ, "ವಿರಾಟಪರ್ವ" ಕಥೆಯನ್ನು ಅಭ್ಯಾಸ ಮಾಡಿದರು, ಅನಂತರ ಸವಿವರವಾದ ರೀತಿಯಲ್ಲಿ ರಾಮಾಯಣ ಮಹಾಭಾರತಗಳನ್ನು ಆಸಕ್ತಿ ಶ್ರದ್ಧಾನಿಷ್ಠೆಗಳಿಂದ ಅಭ್ಯಾಸ ಮಾಡಿದರು. ವೇಣುಗೋಪಾಲದಾಸರ ಮೂಲಕ ಹರಿಕಥಾ ಕಲೆಯನ್ನು ಪಡೆಯುತ್ತಾ, ತುಡಿಯುತ್ತಾ, ಬೆಳೆಯುತ್ತಾ, ನಡೆದ ಗೋಪೀನಾಥದಾಸರು ಹರಿಕಥಾ ಕಲೆಯಲ್ಲಿ ಕೆಲವೇ ಕಾಲದಲ್ಲಿ ಅಖಂಡ ವಿದ್ವಾಂಸರೆನ್ನಿಸಿಕೊಂಡರು. ವೇಣುಗೋಪಾಲದಾಸರ ಪ್ರಭಾವ ಗೋಪೀನಾಥದಾಸರ ಮೇಲೆ ಎಷ್ಟು ತೀವ್ರವಾಗಿತ್ತೆಂದರೆ, ಮುಂದೆ ಗೋಪೀನಾಥದಾಸರು ಊಟ ವನ್ನಾದರೂ ತಪ್ಪಿಸುತ್ತಿದ್ದರು, ಆದರೆ ಹರಿಕಥೆಯನ್ನು ತಪ್ಪಿಸುತ್ತಿರಲಿಲ್ಲ. ಅವರೊಡನೆಯೇ ವೇಣುಗೋಪಾಲರ ಪ್ರಭಾವಲಯದೊಳಕ್ಕೆ ಬಂದವರು

ಗೋಪೀನಾಥದಾಸರ ತಮ್ಮ ಜಯಸಿಂಹದಾಸರು. ಅವರೂ ಸಹ ಅತಿ ಕ್ಷಿಪ್ರವಾಗಿ ಹರಿಕಥಾ ಕಲೆಯಲ್ಲಿ ಸಮರ್ಥರೆನ್ನಿಸಿದರು.

1956ರಲ್ಲಿ ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ವಿಶ್ವಕಲಾಮೇಳದ ವ್ಯವಸ್ಥೆಯಾಗಿತ್ತು. ಇಡೀ ಪ್ರಪಂಚದ ವಿವಿಧ ಭಾಗಗಳಿಂದ ಅಪೂರ್ವ ಕಲಾವಿದರ ತಂಡಗಳು ಅಲ್ಲಿ ಸೇರಿದ್ದು, ಕಲಾಜಗತ್ತಿನ ಹೃದಯದಂತೆ ಕಂಗೊಳಿಸುತ್ತಿತ್ತು ಆಗಿನ ದೆಹಲಿ. ಅಂತಹ ವಿಶ್ವಕಲಾಮೇಳದಲ್ಲಿ ಕರ್ನಾಟಕದ ಪ್ರಾಚೀನ ಕಲೆಗಳಲ್ಲಿ ಒಂದಾದ ಹರಿಕಥಾ ಕಲೆಯ ಪ್ರದರ್ಶನಕ್ಕಾಗಿ ಯಾರನ್ನು ಕಳಿಸಿಕೊಡುವುದೆಂದು ವೇಣುಗೋಪಾಲರು ಯೋಚನೆ ಮಾಡುತ್ತಿದ್ದಾಗ ಮೊದಲು ಅವರ ಮನಸ್ಸಿಗೆ ಹೊಳೆದದ್ದು, ತಮ್ಮಲ್ಲಿಯೇ ಹರಿಕಥಾ ವಿದ್ಯಾಭ್ಯಾಸ ಮಾಡಿ ಅಪಾರ ಜನಪ್ರಿಯತೆ ಪಡೆದಿದ್ದ ಗೋಪೀನಾಥದಾಸರ ಹೆಸರು. ಗೋಪೀನಾಥದಾಸರಿಗೆ ಆಶೀರ್ವಾದ ಮಾಡಿ ದೆಹಲಿಗೆ ಕಳುಹಿಸಿಕೊಟ್ಟರು. ಅವರೊಡನೆ ಅವರ ತಮ್ಮ ದ್ವಾರಕಾನಾಥ್ ಕೂಡ ದೆಹಲಿಗೆ ಹೋದರು.

ಒಂದಾನೊಂದು ಕಾಲದಲ್ಲಿ ಬುದ್ಧಿಸಾಮರ್ಥ್ಯದಿಂದ, ಶೌರ್ಯಪರಾಕ್ರಮಗಳಿಂದ, ತಪಶ್ಶಕ್ತಿಯಿಂದ, ಕಲಾಪ್ರೌಢಿಮೆಯಿಂದ ವಿದ್ವತ್‌ವಿಶಿಷ್ಟತೆಯಿಂದ, ಪಾಂಡಿತ್ಯ ಶ್ರೀಮಂತಿಕೆಯಿಂದ, ಸಂಗೀತ ಸಾಧನೆಗಳಿಂದ ಭರತ ಖಂಡದಲ್ಲೆಲ್ಲಾ ವಿಜಯಪತಾಕೆಯನ್ನು ಮೆರೆಸಿದ ಕರ್ನಾಟಕದಲ್ಲಿ ಇಂದಿಗೂ ಪ್ರತಿಭೆಗೆ ಬರವಿಲ್ಲ, ಪಾಂಡಿತ್ಯಕ್ಕೆ ಕೊರತೆಯಿಲ್ಲ ಎಂಬುದನ್ನು ಗೋಪೀನಾಥದಾಸರು ತಮ್ಮ ಧೀಮಂತ ಶೈಲಿಯ ಕಲಾತ್ಮಕ ಹರಿಕಥೆಯಿಂದ ಮತ್ತೊಮ್ಮೆ ನಿರೂಪಿಸಿದರು. ಅಚ್ಚಕನ್ನಡದಲ್ಲಿ ಹರಿಕಥೆ ಮಾಡುತ್ತಿದ್ದ ಗೋಪೀನಾಥದಾಸರ ಪ್ರತಿಪದವೂ ದುಭಾಷಿಯ ಸಹಾಯದಿಂದಲೇ ತರ್ಜುಮೆಯಾಗುತ್ತಿತ್ತು. ಅಲ್ಲಿ ಪ್ರತಿನಿಧಿಸಿದ್ದ ಉಳಿದೆಲ್ಲ ರಾಜ್ಯಗಳ ಕಲಾವಿದರು ದಾಸರ ಗಂಭೀರವಾಣಿಯನ್ನು ಕೇಳಿ, ಅವರ ಸ್ಫೂರ್ತಿಮೂರ್ತಿ ಯಾರೆಂದು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ದ್ವಾರಕಾನಾಥ್ ಅವರು, ಗೋಪೀನಾಥದಾಸರ ಈ ಸಾಧನೆಯ ಹಿಂದಿರುವ ಶಕ್ತಿಗಳು ಕರ್ನಾಟಕದ ಹರಿಕಥಾಸಿಂಹಗಳಾದ ವೆಂಕಣ್ಣದಾಸರು ಹಾಗೂ ವೇಣುಗೋಪಾಲದಾಸರು ಎಂದು ತಿಳಿಸಿದರು.

ಮಂಡ್ಯದ ಎಂ.ಆರ್. ಗುರುರಾಜದಾಸರು ವೇಣುಗೋಪಾಲದಾಸರ ಶಿಷ್ಯರಾದದ್ದಂತೂ ಇನ್ನೂ ವಿಶಿಷ್ಟವಾದ ಹಿನ್ನೆಲೆಯಲ್ಲಿ. 1940ರ ಸುಮಾರಿಗೆ ದಾಸರು ಮೈಸೂರಿನಲ್ಲಿ ಕಾಂತರಾಜೇ ಅರಸು ತೊಟ್ಟಿಯೆಂದೇ ಪ್ರಸಿದ್ಧವಾಗಿದ್ದ ಸ್ಥಳದಲ್ಲಿ

ಮಹಾಭಾರತದ ಕಥೆ ಮಾಡುತ್ತಿದ್ದು ರಾಜಸೂಯಯಾಗದ ವರ್ಣನೆ ಮಾಡುತ್ತಿದ್ದ ಸಂದರ್ಭ. ಆ ಕಥೆಗೆ ಜಾನಕೀಬಾಯಿ ಎಂಬ ಹೆಣ್ಣುಮಗಳು ಪ್ರತಿನಿತ್ಯವೂ ತಪ್ಪದೆ ಬರುತ್ತಿದ್ದಳು. ಗರ್ಭಿಣಿಯಾದಾಗಲೂ ನಿಲ್ಲಿಸಲಿಲ್ಲ. ಕಡೆಗೆ ನವಮಾಸ ತುಂಬಿ ತುಂಬುಗರ್ಭಿಣಿಯಾದಾಗಲೂ ಕಥೆಗೆ ಬರುವುದನ್ನು ತಪ್ಪಿಸಲಿಲ್ಲ.

ಒಂದು ದಿನ ದಾಸರು ಪ್ರಾಸಂಗಿಕವಾಗಿ ಕಥೆಯಲ್ಲಿ ಪ್ರಹ್ಲಾದನು ತಾಯಿಯ ಗರ್ಭದೊಳಗೇ ಇದ್ದು, ನಾರದರಿಂದ ತಾಯಿಯ ಮೂಲಕ ಪಡೆದ ಜ್ಞಾನೋಪದೇಶವನ್ನು ನಿರೂಪಿಸಿದರು. ಜಾನಕೀಬಾಯಿಗೆ ಏನನ್ನಿಸಿತೋ ಏನೋ ರಾಜಸೂಯ ಯಾಗದ ಮಂಗಳ ಆಗುವವರೆಗೂ ನಾನು ಆ ಮಗುವನ್ನು ಹಡೆಯುವುದಿಲ್ಲ ಎಂದುಬಿಟ್ಟರು. ಮನೆಯವರಿಗೆಲ್ಲಾ ಕಕ್ಕಾಬಿಕ್ಕಿ. 'ರಾಜಸೂಯ ಯಾಗ' ಮಂಗಳ ಆಗಲು ಇನ್ನೂ ಎರಡು ತಿಂಗಳ ಕಾಲವಿತ್ತು. ಆ ಮುತ್ತೈದೆಯ ಶ್ರದ್ಧಾನಿಷ್ಠೆ ಎಷ್ಟಿತ್ತೆಂದರೆ ರಾಜಸೂಯಯಾಗ ಮಂಗಳ ಕಾರ್ಯಕ್ರಮವಾದ ಮೇಲೆಯೇ ಅಂದರೆ ಹನ್ನೊಂದು ತಿಂಗಳು ಗರ್ಭವಾಸವಾದ ಮೇಲೆ ಆ ಮಗುವನ್ನು ತಾಯಿಯ ಹೊಟ್ಟೆ ಕೊಯ್ದು ಈಚೆ ತೆಗೆದರು. ಈಗ ಆ ಮಂಡ್ಯದ ಗುರುರಾಜದಾಸರು ಕರ್ನಾಟಕದ ಅತ್ಯಂತ ಪ್ರಸಿದ್ಧ ಕೀರ್ತನಕಾರರು. ಅವರಿಗೀಗ 53 ವರ್ಷ. ಆಗಾಗ್ಗೆ ಅವರು ತಾವು ಹುಟ್ಟಿದ ಪ್ರಸಂಗವನ್ನು ಸ್ಮರಿಸಿಕೊಂಡು ತಾವು 'ಅಯೋನಿಜ'ರೆಂದು ಗೆಳೆಯರೊಡನೆ ಪರಿಹಾಸ್ಯ ಮಾಡುತ್ತಿರುತ್ತಾರೆ.

ಗುರುರಾಜದಾಸರು ಕೇವಲ ಐದನೇ ವಯಸ್ಸಿನ ಬಾಲಕರಾಗಿದ್ದಾಗ ಹರಿಕಥೆ ಮಾಡುವುದನ್ನು ಕಲಿತರು. ಆರನೆಯ ವಯಸ್ಸಿನಲ್ಲಿಯೇ ಆ ಮಗು ಆಕಾಶವಾಣಿಯಲ್ಲಿ ''ಐರಾವತ'' ಹರಿಕಥೆಯನ್ನು ಯಶಸ್ವಿಯಾಗಿ ಮಾಡಿತು. ವೇಣುಗೋಪಾಲದಾಸರ ಮತ್ತೊಬ್ಬ ಕಿರಿಯ ಶಿಷ್ಯರಾದ ಗೋಪೀನಾಥದಾಸರು ಒಂಬತ್ತು ವರ್ಷ ವಯಸ್ಸಿನ ಮಂಡ್ಯ ಗುರುರಾಜದಾಸರನ್ನು ಮೈಸೂರಿನಿಂದ ಬೆಂಗಳೂರಿಗೆ ಕರೆಯಿಸಿ ಡಿ.ವಿ.ಗುಂಡಪ್ಪನವರ ಮನೆಯಲ್ಲಿ ಅವರ ಮೊದಲ ಸಾರ್ವಜನಿಕ ವೇದಿಕೆಯ ಹರಿಕಥೆಯನ್ನು ವ್ಯವಸ್ಥೆ ಮಾಡಿದರು. ಅನಂತರ ಗುರುರಾಜ ದಾಸರು ಬದುಕಿನಲ್ಲಿ ಹಿಂದಿರುಗಿ ನೋಡಿದ್ದೇ ಇಲ್ಲ. ವೇಣುಗೋಪಾಲದಾಸರ ಶಿಷ್ಯತ್ವದ ಮೂಲಕ, ಮೊಟ್ಟ ಮೊದಲ ಬಾರಿಗೆ ದೊರೆತಿತ್ತು ಹರಿಕಥಾಸಿದ್ಧಿ. ಅನಂತರ ಕ್ರಮೇಣ ಅವರು ಮಂಡ್ಯದ ಗುರುರಾಜದಾಸರೆಂದೇ ಪ್ರಸಿದ್ಧಿ. ಶಾಸ್ತ್ರೀಯ ಹರಿಕಥೆಯ ಹಿನ್ನೆಲೆಯಿಂದಾಗಿ, ಅವರ ಯಶಸ್ಸಿಗೆ ಕಾರಣ ವಾಕ್‌ಶುದ್ಧಿ. ಅನಂತರ ದೊರಕಿತು ಜನಸಮುದಾಯದ ಪ್ರೀತಿವಿಶ್ವಾಸಗಳ ಸಮೃದ್ಧಿ. ವೇಣುಗೋಪಾಲದಾಸರ ಶಿಷ್ಯರಾದ ಮಂಡ್ಯದ ಗುರುರಾಜದಾಸರಿಗೆ ಅನೇಕ ಸಂಘ ಸಂಸ್ಥೆಗಳು, ಪೇಜಾವರ

ಮಠಾಧೀಶ್ವರರೂ, ಉತ್ತರಾಧಿ ಮಠಾಧೀಶ್ವರರೂ, ಶ್ರೀಪಾದರಾಜ ಮಠಾಧೀಶ್ವರರೂ ಸನ್ಮಾನ ಮಾಡಿ ಗೌರವಿಸಿದ್ದಾರೆ.

ವೇಣುಗೋಪಾಲದಾಸರ ಸಾಕ್ಷಾತ್ ಪುತ್ರರಾದ ಮೈಸೂರಿನ ಗುರುರಾಜದಾಸರು ತಂದೆಯ ಆಶೀರ್ವಾದ ಆರೈಕೆ ಹಾರೈಕೆಗಳಿಂದ ಹರಿಕಥಾ ಕಲೆಯನ್ನು ಮೈಗೂಡಿಸಿಕೊಂಡು ರಾಜ್ಯದ ನಾನಾಭಾಗಗಳಲ್ಲಿ ಸುಪ್ರಸಿದ್ಧರಾಗಿದ್ದಾರೆ. ಟಿ.ವಿ.ಗುರುರಾಜದಾಸರ ಶರೀರ, ಶಾರೀರ, ಮುಖಲಕ್ಷಣ, ತೇಜಸ್ಸು ಎಲ್ಲಾ ತಂದೆಯಂತೆಯೇ. ಅದೇ ರೀತಿ ಹರಿಕಥಾ ಕಲೆಯೂ ಮಗನಿಗೆ ಸಾರ್ಥಕವೆನ್ನುವಂತೆ ಪ್ರಾಪ್ತವಾಗಿದೆ.

ಇನ್ನೂ ಅನೇಕ ಜನ ಶಿಷ್ಯಂದಿರು ನಾಡಿನ ಭಾಗಗಳಲ್ಲಿ ಒಂದಲ್ಲ ಒಂದು ರೀತಿ ವೇಣುಗೋಪಾಲದಾಸರಿಂದ ಪ್ರಭಾವಿತರಾಗಿ ಹರಿಕಥಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವೇಣುಗೋಪಾಲದಾಸರು ಮೈಸೂರಿನಲ್ಲಿ ಹರಿಕಥೆ ಮಾಡುತ್ತಿದ್ದಾಗ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಪ್ರತಿವರ್ಷವೂ ಅತ್ಯಂತ ವೈಭವಪೂರ್ಣವಾಗಿ ಗಣಪತಿ ಉತ್ಸವವನ್ನು ನಡೆಸುತ್ತಿದ್ದು, ಅದರ ಪ್ರಮುಖ ಕಾರ್ಯಕ್ರಮವೆಂದರೆ ದಾಸರ ಹರಿಕಥೆಯಾಗಿರುತ್ತಿತ್ತು. ಆ ಸಂಸ್ಕೃತ ಕಾಲೇಜಿನ ದ್ವೈತವೇದಾಂತ ಪ್ರಾಧ್ಯಾಪಕರಾದ ದೊಡ್ಡಬಳ್ಳಾಪುರ ವಾಸುದೇವಾಚಾರ್ಯರಲ್ಲಿ ಭಾಗವತವನ್ನು ಸಕಲವೇದಾಂತ ಶಾಸ್ತ್ರಗಳೊಡನೆ ನಾಲ್ಕು ವರ್ಷಗಳ ಕಾಲ ಅಭ್ಯಾಸ ಮಾಡಿದ್ದರ ಪ್ರತಿಫಲವೇ, ವೇಣುಗೋಪಾಲದಾಸರು ಮುಂದೆ ರಚಿಸಿದ 'ಭಾಗವತ' ಗ್ರಂಥ. ಈ ಗ್ರಂಥವನ್ನು ದಾಸರ ಪರಮ ಶಿಷ್ಯರಾದ ಮಂಡ್ಯದ ಗುರುರಾಜದಾಸರು ತಮ್ಮ ಗುರುಭಕ್ತಿ ಸಮರ್ಪಣ ನಿಮಿತ್ತ ಪ್ರಕಟಿಸಿದ್ದಾರೆ.

ದಾಸರು ಬೆಂಗಳೂರಿಗೆ ಮೈಸೂರಿನಿಂದ ಬಂದಿದ್ದೂ ಒಂದು ಆಕಸ್ಮಿಕವೇ. 1957ರಲ್ಲಿ ವೆಂಕಣ್ಣದಾಸರ ಹಿರಿಯ ಮಗ ಕರಿಗಿರಿ ಆಚಾರ್ಯರು, ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ರಾಮಮಂದಿರವನ್ನು ಕಥೆಗಾಗಿ ಗೊತ್ತು ಮಾಡಿ, ಮೈಸೂರಿನಲ್ಲಿ ಅಪಾರ ಜನಪ್ರಿಯತೆ ಪಡೆದಿದ್ದ ವೇಣುಗೋಪಾಲದಾಸರನ್ನು ಕರೆಸಿಕೊಂಡರು. ರಾಮಮಂದಿರದಲ್ಲಿ ಬೆಳಿಗ್ಗೆ ಭಾಗವತ, ಸಂಜೆ ಭಾರತ ಹೀಗೆ ಎರಡು ವರ್ಷ ಕಥೆ ಮಾಡಿದರು. ಬೆಂಗಳೂರಿನಲ್ಲಿ ಪ್ರತಿನಿತ್ಯ ನಾಲ್ಕೈದು ಸಹಸ್ರ ಜನ ಹರಿಕಥೆಗೆ ಸೇರಲಾರಂಭಿಸಿದರು. ಹರಿಕಥೆಗೆ ಬರುತ್ತಿದ್ದ ಆಸ್ತಿಕ ಬಂಧುಗಳೆಲ್ಲಾ ದಾಸರಲ್ಲಿ ವಿಶೇಷ ವಿಶ್ವಾಸ ಮೂಡಿ ಚಾಮರಾಜಪೇಟೆಯ ರಾಮಚಂದ್ರ ಅಗ್ರಹಾರ ದಲ್ಲಿ ಶ್ರೀ ಕೃಷ್ಣಸ್ವಾಮಿರಾಯರೆಂಬುವರು ದಾನವಾಗಿ ನೀಡಿದ್ದ ನಿವೇಶನವೊಂದರಲ್ಲಿ

ದಾಸರಿಗೆ ಒಂದು ಮನೆಯನ್ನು ಕಟ್ಟಿಸಿಕೊಟ್ಟರು. ಅಂದಿನಿಂದ ಇಂದಿನವರೆಗೂ ದಾಸರು ಒಂದು ದಿನವೂ ತಪ್ಪದೆ ಹರಿಕಥೆ ಮಾಡುತ್ತಿದ್ದಾರೆ. 1990ರಲ್ಲಿ ದಾಸರ ದ್ವಿತೀಯ ಪತ್ನಿ ಶೇಷಮ್ಮನವರು ಕಾಲವಾದರು. ಈಗ ದಾಸರಿಗೆ ತೊಂಭತ್ತೆರಡು ವರ್ಷ ವಯಸ್ಸು. ಈಗಲೂ ಅವರು ಪ್ರತಿದಿನ ತಮ್ಮ ಮನೆಯಲ್ಲಿ ಪ್ರತಿದಿನ ಸಂಜೆ ಆರರಿಂದ ಏಳರವರೆಗೆ ಹರಿಕಥೆ ಮಾಡುತ್ತಾರೆ. ಏಳೂವರೆಯಿಂದ ಎಂಟೂವರೆವರೆಗೆ ಚಿಕ್ಕಪೇಟೆ ವ್ಯಾಸರಾಯರ ಮಠದ ಗೋಪಾಲಕೃಷ್ಣ ದೇವರ ಗುಡಿಯಲ್ಲಿ 'ಭಾಗವತ' ಕಥೆ ಮಾಡುತ್ತಿದ್ದಾರೆ.

ಮೈಸೂರು, ಬೆಂಗಳೂರುಗಳಲ್ಲದೆ ದಾಸರು ದಾವಣಗೆರೆಯಲ್ಲಿ ನಾಲ್ಕು ವರ್ಷ, ಶಿವಮೊಗ್ಗದಲ್ಲಿ ಒಂದು ವರ್ಷ, ಚಿಕ್ಕನಾಯಕನಹಳ್ಳಿಯಲ್ಲಿ ಆರು ತಿಂಗಳು, ಪಾವಗಡದಲ್ಲಿ ಎರಡು ತಿಂಗಳು, ಬಳ್ಳಾರಿಯಲ್ಲಿ ಒಂದು ತಿಂಗಳು, ಮದರಾಸಿನ ದಾಸಪ್ರಕಾಶ್ ಹೋಟೆಲಿನ ಧರ್ಮಪ್ರಕಾಶ ಸೀತಾರಾಮರಾಯರ ಮನೆಯಲ್ಲಿ, ಬೊಂಬಾಯಿಯಲ್ಲಿ, ಹೀಗೆ ನಾನಾ ಕಡೆ ಹರಿಕಥೆ ಮಾಡಿದ್ದಾರೆ.

ಉಡುಪಿಯಲ್ಲಿ ಆಗ ಪೇಜಾವರ ಸ್ವಾಮಿಗಳ 'ಪರ್ಯಾಯಕಾಲ'. ಪೇಜಾವರ ಶ್ರೀಗಳು ದಾಸರನ್ನು ಉಡುಪಿಗೆ ಆಹ್ವಾನಿಸಿ 10 ದಿನಗಳ ಕಾಲ 'ಶ್ರೀನಿವಾಸ ಕಲ್ಯಾಣ' ಕಥೆ ವ್ಯವಸ್ಥೆ ಮಾಡಿದ್ದರು. ಶತಾಯುಷಿಗಳಾದ ಪುತ್ತಿಗೆ ಸ್ವಾಮಿಗಳು ಅತ್ಯಂತ ದಣಿದಿದ್ದರೂ, ದೇಹ ಕುಗ್ಗಿದ್ದರೂ, ಪೇಜಾವರ ಹಾಗೂ ಭಂಡಾರಕೇರಿ ಸ್ವಾಮಿಗಳ ಸಹಾಯದಿಂದ ದಾಸರ ಕಥೆಗೆ ಬಂದು ಕುಳಿತು ಶ್ರೀನಿವಾಸಕಲ್ಯಾಣ ಕಥೆಯನ್ನು ಶ್ರವಣ ಮಾಡಿದರು. ಕಥೆ ಮುಗಿದ ಮೇಲೆ ದಾಸರನ್ನು ಕುರಿತು 'ನೀವು ಕಥೆ ಮಾಡಿ ನಮ್ಮನ್ನು ಉದ್ಧಾರ ಮಾಡಿದಿರಿ, ನೀವೂ ಉದ್ಧಾರರಾದಿರಿ' ಎಂದರು.

ಬೆಂಗಳೂರಿನಲ್ಲಿ ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಆಗ ಹರಿಕಥೆ ನಡೆಯುತ್ತಿತ್ತು. ಶಿವಮೂರ್ತಿ ಶಾಸ್ತ್ರಿಗಳು ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲ. ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಕಥೆ ಕೇಳಲು ಬಂದು ಕುತೂಹಲ ಹೆಚ್ಚಿದಂತೆಲ್ಲಾ ಆಸಕ್ತರಾಗಿ, ಸಂಪೂರ್ಣ ಉಪಸ್ಥಿತರಿದ್ದು, ಕಡೆಯಲ್ಲಿ ವೇಣುಗೋಪಾಲದಾಸರನ್ನು ಭಾರತದ ಸಂಸ್ಕೃತಿ ಪುರುಷರೆಂದು ಮುಕ್ತಕಂಠದಿಂದ ಶ್ಲಾಘಿಸಿದರು.

ದಾಸರ ಕಥಾಕೀರ್ತನ ಸಾಧನೆಯನ್ನು ಪರಿಗಣಿಸಿ ಮಂತ್ರಾಲಯದ ರಾಘವೇಂದ್ರಸ್ವಾಮಿಗಳ ಮಠಾಧೀಶರಾಗಿದ್ದ ಸುಮತೀಂದ್ರತೀರ್ಥರೂ, ವ್ಯಾಸರಾಜ

ಮಠಾಧೀಶರುಗಳಾದ ಶ್ರೀ ವಿದ್ಯಾಪ್ರಸನ್ನತೀರ್ಥರೂ, ವಿದ್ಯಾಪಯೋನಿಧಿ ತೀರ್ಥ ಶ್ರೀಪಾದರು, ಫಲಿಮಾರು–ಭಂಡಾರಕೇರಿ ಮಠಾಧೀಶರಾದ ವಿದ್ಯಾಮಾನ್ಯತೀರ್ಥರು ವೇಣುಗೋಪಾಲದಾಸರಿಗೆ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿ ಗೌರವಿಸಿದ್ದಾರೆ. ಅವರ ಪರಂಪರೆ, ಹರಿದಾಸ ಸಂಪ್ರದಾಯ, ಕೀರ್ತನ ಪಟುತ್ವ, ಸದ್ಗುಣ, ಹರಿಕಥಾ ಹಿರಿಮೆ, ಸಂಗೀತಸುಧೆ, ವಾಚೋವಿಧೇಯ ಕಥಾ ಸ್ವಾರಸ್ಯಗಳನ್ನು ಕಂಡು ನೋಡಿ ಆನಂದಿಸಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಅರಮನೆ ಗುರುಮನೆಗಳು, ರಾಷ್ಟ್ರೀಯ ಮಹತ್ವದ ಸಂಘ ಸಂಸ್ಥೆಗಳು, ಗಣ್ಯವ್ಯಕ್ತಿಗಳು, ವಿದ್ಯಾಸಂಸ್ಥೆಗಳು, ಸಾಂಸ್ಕೃತಿಕ ಸಂಘಗಳು ದಾಸರನ್ನು ಹೃತ್ಪೂರ್ವಕ ಗೌರವಿಸಿ, ಅಭಿನಂದಿಸಿ, ಆ ಮೂಲಕ ತಮ್ಮ ಕೀರ್ತಿ ಗೌರವ ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಂಡಿವೆ.

ತುಮಕೂರಿನಲ್ಲಿ 1927ರಲ್ಲೇ ಹರಿಕಥಾ ಕಲೆಯ ಪ್ರಾರಂಭಿಕ ದಿನಗಳಲ್ಲೇ ಅಲ್ಲಿಯ ಜನತೆಯ ಮೇಲೆ ದಾಸರ ಪ್ರಭಾವದ ತೀವ್ರತೆ ಎಷ್ಟಿತ್ತೆಂದರೆ ಆಗ ಅವರಿತ್ತ ''ಹರಿಕಥಾಂಬುಧಿಚಂದ್ರ'' ಪ್ರಶಸ್ತಿ ದಾಸರ ಜೊತೆಜೊತೆಯಲ್ಲೇ ಏಳು ದಶಕಗಳಿಂದಲೂ ಬರುತ್ತಿದೆ. ಈಗಲೂ ಅವರು ''ಹರಿಕಥಾಂಬುಧಿಚಂದ್ರ ಟಿ.ಕೆ. ವೇಣುಗೋಪಾಲದಾಸರು'' ಎಂದೇ ಚಿರಪರಿಚಿತರು. ನಟನಕಲಾ ಸಂಘದವರು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಭವ್ಯ ಸಮಾರಂಭವೊಂದರಲ್ಲಿ 1967ರಲ್ಲಿ 'ಕೀರ್ತನ ಕಂಠೀರವ' ಎಂಬ ಪ್ರಶಸ್ತಿ ನೀಡಿದರು. ಉಡುಪಿಯ ಶ್ರೀಕೃಷ್ಣ ಮಠದಿಂದ 1971ರಲ್ಲಿ ''ಕೀರ್ತನಾಲಂಕಾರ'' ಪ್ರಶಸ್ತಿ ಲಭ್ಯವಾಯಿತು. ಬೆಂಗಳೂರಿನ ಸಾರಸ್ವತ ಮಹಾವಿದ್ಯಾನಿಲಯದಿಂದ 1984ರಲ್ಲಿ ''ವಿಷ್ಣುತತ್ವಪ್ರತಿಪಾದನ ಧುರಂಧರ'' ಎಂಬ ಪ್ರಶಸ್ತಿಯೂ, 1985ರಲ್ಲಿ ಕರ್ನಾಟಕ ಕೀರ್ತನಕಲಾ ಪರಿಷತ್ತಿನವರಿಂದ ಪ್ರಶಸ್ತಿಪತ್ರವೂ, 1987ರಲ್ಲಿ ಪೇಜಾವರ ಮಠದಿಂದ ''ದಾಸಸಾಹಿತ್ಯ ನಿಧಿ'' ಎಂಬ ಪ್ರಶಸ್ತಿಯೂ ಲಭಿಸಿದವು. 1993ರಲ್ಲಿ ದೇವರಾಯನದುರ್ಗದಲ್ಲಿ ನಡೆದ ದಾಸಸಾಹಿತ್ಯ ಸಮ್ಮೇಳನದಲ್ಲಿ ವ್ಯಾಸರಾಯ ಮಠಾಧೀಶ್ವರರ ಅಧ್ಯಕ್ಷತೆಯಲ್ಲಿ ಶ್ರೀ ಪಾದರಾಜ ಮಠಾಧೀಶ್ವರರ ಸಮ್ಮುಖದಲ್ಲಿ ಶ್ರೀ ಪಾದರಾಜ ಹರಿದಾಸ ಜೈತ್ರಯಾತ್ರಾ ಸಮಿತಿಯು ''ಹರಿದಾಸ ಕುಲತಿಲಕ'' ಎಂಬ ಪ್ರಶಸ್ತಿಯನ್ನು ದಾಸರಿಗೆ ನೀಡಿ ಗೌರವಿಸಿತು. ದಾಸರ ಅಪಾರ ಕೀರ್ತನ ಕೊಡುಗೆಯನ್ನು ಪರಿಗಣಿಸಿದ ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯೂ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಕೇಂದ್ರ ಸರ್ಕಾರದವರು ದಾಸರಿಗೆ 375–00 ರೂ.ಗಳ ಮಾಸಾಶನವನ್ನು, ಕರ್ನಾಟಕ ಸರ್ಕಾರದವರು 500–00 ರೂ.ಗಳ ಗೌರವ ಮಾಸಾಶನವನ್ನು ನೀಡಿ ಗೌರವಿಸಿದ್ದಾರೆ.

ಕೀರ್ತನಕಾರರಿಗೆ ಕಿರೀಟಪ್ರಾಯದಂತಿರುವ ದಾಸರು ರಾಜ್ಯಮಟ್ಟದಲ್ಲಿ ನಡೆದ ಕೀರ್ತನಕಾರರ ಸಮ್ಮೇಳನಗಳಿಗೆ ಎರಡು ಬಾರಿ ಅಧ್ಯಕ್ಷತೆ ವಹಿಸಿದ್ದಾರೆ.

ವೇಣುಗೋಪಾಲದಾಸರ ಗ್ರಂಥಾವಲೋಕನ ಬಹುಮುಖ್ಯವಾದುದು. ಅಧ್ಯಯನ ಮಾಡುತ್ತಲೇ ಬರೆದುಕೊಳ್ಳುವುದು, ಗುರುತು ಹಾಕಿಕೊಳ್ಳುವುದು, ಹಾಗೆ ಬರೆದದ್ದನ್ನು ಮನನ ಮಾಡುವುದು ಅವರ ಅಭ್ಯಾಸ. ಕಳೆದ ಎಪ್ಪತ್ತು ವರ್ಷಗಳಿಂದಲೂ ನಿರಂತರ ಪ್ರತಿದಿನ ಬೆಳಗಿನಿಂದ ರಾತ್ರಿಯವರೆಗೂ ಇವರು ಬರೆದಿಡುತ್ತಾ ಬಂದಿರುವ ಪುಟಗಳ ಸಂಖ್ಯೆ ಲಕ್ಷವನ್ನು ದಾಟಿದೆ. ವ್ಯಾಸಸಾಹಿತ್ಯ, ದಾಸಸಾಹಿತ್ಯ ಎರಡನ್ನು ಬರೆಯುತ್ತಾ, ಉತ್ತಮ ಶಾಸ್ತ್ರ ವಿಚಾರಗಳನ್ನು, ಹರಿದಾಸ ಸಾಹಿತ್ಯದೊಡನೆ ಸಮನ್ವಯ ಮಾಡುತ್ತಾ ಇರುವ ದಾಸರು ಇಂದಿಗೂ ದಿನಕ್ಕೆ ಎಂಟು ಘಟಿಗಳ ಕಾಲ ಬರೆಯುತ್ತಾರೆ. ಸದಾಚಾರದ ಪರಮಪವಿತ್ರವಾದ ಪರಿಶುದ್ಧ ಬದುಕನ್ನು ಬದುಕುತ್ತಿರುವ ದಾಸರು ಆರೋಗ್ಯವಂತರಾಗಿ, ಸದೃಢರಾಗಿ ಅಜಾನುಬಾಹು ವ್ಯಕ್ತಿತ್ವವನ್ನು ಪಡೆದಿದ್ದು, ಹರಿದಾಸ ಸಾಹಿತ್ಯ ತಪಸ್ಸನ್ನೇ ನಡೆಸುತ್ತಿದ್ದಾರೆ.

ಸತ್ಸಂಪ್ರದಾಯದ, ಗೆರೆ ದಾಟದ, ನಡೆನುಡಿ, ಬರವಣಿಗೆ, ಹರಿಕಥಾನುವಾದ ಶೈಲಿ ಇವರಿಗೇ ಮೀಸಲಾದದ್ದು. ಕೀರ್ತನದಲ್ಲಿ ತತ್ವವನ್ನು ಸಮರ್ಥವಾಗಿ, ಅಧಿಕಾರವಾಣಿಯಿಂದ ಹೇಳುತ್ತಲೇ, ಯಾರ ಮನಸ್ಸಿಗೂ ಸ್ವಲ್ಪವೂ ನೋವಾಗದಂತೆ ತತ್ತ್ವವನ್ನು ಮುಚ್ಚುಮರೆಯಿಲ್ಲದೆ ಬಿಚ್ಚಿಡುವ ಇವರ ಪರಿಪಾಠ ಆಶ್ಚರ್ಯಕರ.

ದಾಸರ ಕೃತಿಗಳಲ್ಲಿ ಅಪ್ರಕಟಿತವೇ ಬಹಳಷ್ಟಿದ್ದು, ಪ್ರಕಟಿತ ಕೃತಿಗಳು ಈ ಕೆಳಕಂಡಂತಿವೆ:

**1) ಸನತ್ಸುಜಾತೀಯ:** ಸಂಸ್ಕೃತದ ಮೂಲಗ್ರಂಥಕ್ಕೆ ದಾಸರು ಈ ಕೃತಿಯಲ್ಲಿ ಕನ್ನಡ ಭಾವಾರ್ಥ ಬರೆದಿದ್ದಾರೆ.

**2) ವ್ಯಾಸರಾಜರು:** ದಾಸರು ವ್ಯಾಸರಾಜರ ಹೆಸರು ಕೇಳಿದೊಡನೆಯೇ ಭಕ್ತಿಯುದ್ರೇಕದಿಂದ ಪುಳಕಿತರಾಗುತ್ತಾರೆ. ವ್ಯಾಸರಾಜರ ಪೂರ್ವ ವೃತ್ತಾಂತ, ವ್ಯಾಸರಾಜರ ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ ಸಾಧನೆಗಳ ವಿವರಗಳಿರುವ ಈ ಕೃತಿಯಲ್ಲಿ ಹರಿದಾಸ ಸಂಸ್ಕೃತಿಗೆ ವ್ಯಾಸರಾಜರು ನೀಡಿರುವ ಕೊಡುಗೆಯ ಪೂರ್ಣ ಪರಿಚಯವಿದೆ. ವ್ಯಾಸರಾಜರ ಕೆಲವು ಅಪೂರ್ವ ಕೀರ್ತನೆಗಳಿಗೆ ದಾಸರು ಈ ಕೃತಿಯಲ್ಲಿ ಅರ್ಥ ಬರೆದಿದ್ದಾರೆ.

**3) ಪುರಂದರದಾಸರು:** ಪುರಂದರದಾಸರ ಪೂರ್ವಜನ್ಮಗಳ ವಿಷಯ, ನವಕೋಟಿನಾರಾಯಣ ಪುರಂದರದಾಸರಾದ ಪರಿವರ್ತನ ಪ್ರಸಂಗ, ಪುರಂದರ ದಾಸರನ್ನು ಕುರಿತ ಶಾಸನಗಳು, ಐತಿಹ್ಯಗಳು, ಅವರದೇ ಆದ ಕೆಲವು ಹಾಡುಗಳಿಂದ ಅವರ ಬದುಕನ್ನು ವಿಶ್ಲೇಷಿಸುವ ವಿಶಿಷ್ಟ ಶೈಲಿಗಳಿಂದಾಗಿ ಈ ಕೃತಿ ಗಮನಾರ್ಹವಾಗಿದೆ.

**4) ಜಗನ್ನಾಥದಾಸರು:** ಈ ಕೃತಿಯಲ್ಲಿ ಹರಿಕಥಾಮೃತಸಾರ ಗ್ರಂಥ ರಚಿಸಿದ ದಾಸಕುಲತಿಲಕ ಜಗನ್ನಾಥದಾಸರ ಪೂರ್ವವೃತ್ತಾಂತ ಹಾಗೂ ಅವರು ದಾಸರಾದ ಪ್ರಸಂಗ, ಅವರ ಕೆಲವು ಅಪೂರ್ವ ಕೀರ್ತನೆಗಳು, ದಾಸಸಾಹಿತ್ಯದ ವರ್ಣನೆ, ಹರಿಕಥಾಮೃತಸಾರ ಪರಿಚಯ ಮುಂತಾದುವಿದ್ದು ವಿಜಯದಾಸರು, ಗೋಪಾಲ ದಾಸರ ಬಗೆಗೂ ಕೆಲವು ವಿಚಾರಗಳು ಇಲ್ಲಿ ಪ್ರಕಟಿತವಾಗಿವೆ.

**5) ಬಿಂಬಗುರು ಕಲ್ಪತರು** ಮತ್ತು

**6) ಶ್ರೀ ರಾಘವೇಂದ್ರ ವೈಶಿಷ್ಟ್ಯ.**

ಇವೆರಡು ಗ್ರಂಥಗಳು ರಾಘವೇಂದ್ರಸ್ವಾಮಿಗಳ ಅವತಾರ ವೈಶಿಷ್ಟ್ಯಗಳನ್ನು, ರಾಘವೇಂದ್ರಸ್ವಾಮಿಗಳ ಸಿದ್ಧಿಸಾಧನೆಗಳನ್ನು ವಿಶ್ಲೇಷಿಸುತ್ತವೆ. ರಾಘವೇಂದ್ರಸ್ವಾಮಿ ಗಳೆಂದರೆ ಅಪಾರ ಭಕ್ತಿಶ್ರದ್ಧೆಯಿರುವ ದಾಸರು ಈ ಕೃತಿಗಳಲ್ಲಿ ಹೃದಯತುಂಬಿ ರಾಯರನ್ನು ಸ್ತುತಿಸಿ ಬರೆದಿದ್ದಾರೆ.

**7) ಕನಕನ ಗುಟ್ಟು:** ಕನಕನನ್ನು ಕೆಣಕಬೇಡ, ಕೆಣಕಿ ತಿಣಕಬೇಡ ಎಂಬ ಗಾದೆಯೇ ಇದ್ದು ಕನಕನ ಮುಂಡಿಗೆಗಳು ಇಂದಿಗೂ ವ್ಯಾಸಗುಟ್ಟಾಗಿಯೇ ಉಳಿದಿದ್ದು ವಿದ್ವಾಂಸರಿಗೆ ಪಂಥಾಹ್ವಾನವನ್ನು ನೀಡುತ್ತವೆ. ಕನಕದಾಸರ ವಿಶಿಷ್ಟ ಕೃತಿಯೊಂದರ ಒಳಗುಟ್ಟನ್ನು ದಾಸರು ಈ ಕೃತಿಯಲ್ಲಿ ಬಿಡಿಸಿದ್ದಾರೆ.

**8) ಶ್ರೀಮದ್ಭಾಗವತ:** ವೇಣುಗೋಪಾದಾಸರು ರಚಿಸಿರುವ ಕೃತಿಗಳಲ್ಲೆಲ್ಲಾ ಅತ್ಯಂತ ಮಹತ್ವಪೂರ್ಣವಾದ ಕೃತಿ ಇದು. 670 ಪುಟಗಳ ಈ ಉದ್ಗ್ರಂಥ ಭಾಗವತವನ್ನು ಸಾಪ್ತಾಹಿಕ ರೂಪದಲ್ಲಿ ಪ್ರಕಟಿಸಿದೆ. ಸಪ್ತಾಹಕ್ಕೆ ಅನುವಾಗುವಂತೆ ಭಾಗವತವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಈ ಕೃತಿಯ ವೈಶಿಷ್ಟ್ಯವೆಂದರೆ ಪ್ರತಿ ಸ್ಕಂದದ ಆದ್ಯಂತ ಶ್ಲೋಕಗಳನ್ನು ಆದಷ್ಟು ಅರ್ಥಪೂರ್ಣವಾಗಿ ವಿವರಿಸಲ್ಪಟ್ಟಿರುವುದು.

ಮಧ್ವಾಚಾರ್ಯರು ರಚಿಸಿರುವ ಸರ್ವಮೂಲ ಗ್ರಂಥಗಳಲ್ಲಿ ಪ್ರಖ್ಯಾತವಾದ ಭಾಗವತ ತಾತ್ಪರ್ಯನಿರ್ಣಯವನ್ನು ಆಗತ್ಯವಿದ್ದಲ್ಲಿ ಅಳವಡಿಸಿರುವುದು ಇದರ ವೈಶಿಷ್ಟ್ಯ. ಕಥೆಗಳನ್ನು ಆದಷ್ಟೂ ಸಂಗ್ರಹವಾಗಿ ಹೇಳುವ ತತ್ತ್ವಗಳನ್ನು ವಿಶದಪಡಿಸಲಾಗಿದೆ. ಶ್ರುತಿಗೀತೆ ಮುಂತಾದವುಗಳ ಪ್ರತಿಶ್ಲೋಕದ ಅರ್ಥವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬರೆಯಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಭಾಗವತದ ಮೂಲ ಅರ್ಥ ಭಾವಗಳಿಗೆ ಸಹಸ್ಪಂದಿಯಾಗುವಂತೆ ಹರಿದಾಸರ ಕನ್ನಡ ಪದ ಪದ್ಯ ಸುಳಾದಿ ಉಗಾಭೋಗಗಳನ್ನು ಸಂವಾದಿಯಾಗಿ ನೀಡಲಾಗಿದೆ. ಈ ಕೃತಿಯನ್ನು ದಾಸರ ಅತ್ಯಂತ ಅಭಿಮಾನಿ ಹರಿದಾಸ ಶಿಷ್ಯರಾದ ಮಂತ್ರ್ಯವ ಗುರುರಾಜದಾಸರು ಗುರುಪತ್ನಿ ಶೇಷಮ್ಮನವರಿಗೆ ಸಮರ್ಪಿಸಿರುವ ಭಕ್ತಿಯ ಕುಸುಮವನ್ನಾಗಿ ಪ್ರಕಟಿಸಿದ್ದಾರೆ.

ಇವುಗಳಲ್ಲದೆ ವಿನಾಯಕ, ಗೋಪಿಕಾ ಸ್ತ್ರೀಯರ ವಿಚಾರ, ಹಾಗೂ ಪಂಚಕನ್ಯೆಯರು, ಈ ವಿಷಯಗಳಿಗೆ ಸಂಬಂಧಿಸಿದಂತೆ ದಾಸರು ಸಣ್ಣ ಹೊತ್ತಗೆಗಳನ್ನು ಪ್ರಕಟಿಸಿದ್ದಾರೆ. ಕೃತಿಗಳ ಹೆಸರೇ ತಿಳಿಸುವಂತೆ ಈ ವಿಷಯವನ್ನು ಶಾಸ್ತ್ರೀಯ ಆಧಾರದ ಮೇಲೆ ದಾಸರು ನಿರೂಪಿಸಿದ್ದಾರೆ.

ಪ್ರಸ್ತುತ ದಾಸರು ರಚಿಸುತ್ತಿರುವ ಮಹತ್ವದ ಕೃತಿ "ಶ್ರೀಮದ್ರಾಮಾಯಣ" ಸಿದ್ಧಾಂತದ ಆಧಾರದ ಮೇಲೆ ದಾಸರು ಸಂಪೂರ್ಣ ರಾಮಾಯಣವನ್ನು ಕಥಾನಕವನ್ನಾಗಿ ರಚಿಸುತ್ತಿದ್ದಾರೆ.

ಹರಿದಾಸರ ದೇವರನಾಮಗಳನ್ನು ಅಪೂರ್ವವಾದ ಹಾಗೂ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿಶ್ಲೇಷಿಸುತ್ತಾ ಅರ್ಥೈಸುವುದು ವೇಣುಗೋಪಾಲದಾಸರ ವೈಶಿಷ್ಟ್ಯ. ಈ ಅರ್ಥವಂತಿಕೆಯ ಕಲೆಯಲ್ಲಿ ಅತ್ಯಂತ ಪ್ರಸಿದ್ಧರಾಗಿರುವ ವೇಣುಗೋಪಾಲದಾಸರು "ನೀನ್ಯಾಕೋ ನಿನ್ನ ಹಂಗ್ಯಾಕೋ – ನಿನ್ನ ನಾಮದ ಬಲವೊಂದಿದ್ದರೆ ಸಾಕೋ" ಎನ್ನುವ ದಾಸರ ಕೃತಿಗೆ ಅರ್ಥಮಾಡಿಸುವ ರೀತಿಯನ್ನು ಮಾದರಿಗಾಗಿ, ಓದುಗರ ಅವಗಾಹನೆಗೆ ಇಲ್ಲಿ ಕೊಡಲಾಗಿದೆ.

**ಕಾನಡ ರಾಗ – ಆದಿತಾಳ**

ನೀನ್ಯಾಕೊ ನಿನ್ನ ಹಂಗ್ಯಾಕೊ
ನಿನ್ನ ನಾಮದ ಬಲವೊಂದಿದ್ದರೆ ಸಾಕೋ ॥ ಪ ॥

ಆಮರ ಈಮರ ವೆಂದೆನ್ನುತಿರೆ
ರಾಮ ನಾಮವೆ ವ್ಯಾಧನ ಮನುಷನ ಮಾಡಿತೊ ॥ ೧ ॥

ನಾರಾಯಣನೆನ್ನದೆ ನಾರಗನೆನ್ನಲು
ಘೋರ ಪಾತಕಿಯನು ನಾಮವೆ ಕಾಯ್ದಿತೊ ॥ ೨ ॥

ತಂದೆ ಪ್ರಹ್ಲಾದನ ಬಾಧೆಯ ಪಡಿಸೆ ಗೋ
ವಿಂದನೆಂಬ ಸಿರಿನಾಮವೆ ಕಾಯ್ದಿತೊ ॥ ೩ ॥

ಉತ್ತರೆ ಗರ್ಭದಿ ಸುತ್ತಲಸ್ತ್ರವಿರೆ
ಚಿತ್ತಜಪಿತ ನಿನ್ನ ನಾಮವೆ ಕಾಯ್ದಿತೊ ॥ ೪ ॥

ಕರಿಮಕರಿಗೆ ಸಿಕ್ಕು ಮೊರೆಯಿಡುತಿರುವಾಗ
ಪರಮಪುರುಷ ಹರಿನಾಮವೆ ಕಾಯ್ದಿತೊ ॥ ೫ ॥

ನಾರಿಯನೆಳೆ ತಂದು ಸೀರೆಯ ಸೆಳೆಯುತಿರೆ
ದ್ವಾರಕಾಪತಿ ನಿನ್ನ ನಾಮವೆ ಕಾಯ್ದಿತೊ ॥ ೬ ॥

ಹಸುಳ ಧ್ರುವರಾಯನು ಅಡವಿಗೆ ಪೋದಾಗ
ವಸುದೇವಸುತ ನಿನ್ನ ನಾಮವೆ ಕಾಯ್ದಿತೊ ॥ ೭ ॥

ನಿನ್ನ ನಾಮಕೆ ಸರಿಯಾವುದ ಕಾಣೆನೋ
ಪನ್ನಗಶಯನ ಶ್ರೀ ಪುರಂದರ ವಿಠಲ ॥ ೮ ॥

ಈ ದೇವರ ನಾಮದ ಪಲ್ಲವಿಯನ್ನು ನೋಡಿದರೆ "ನಮ್ಮನ್ನು ದೇವರು ಕಾಪಾಡಬೇಕಾದ್ದಿಲ್ಲ. ಅವನ ಬಿಡಿಕಾಸಿನಷ್ಟೂ ಋಣವೂ ಬೇಡ. ಅವನ "ರಾಮ, ಕೃಷ್ಣ, ಹರಿ ಮುಂತಾದ ನಾಮಗಳೇ ಸಾಕು" ಎಂಬ ಅರ್ಥವನ್ನು ಕೊಡುತ್ತವೆ. ಮೇಲ್ನೋಟದ ಈ ಅರ್ಥವು ನಿಂದ್ಯವು. ಏಕೆಂದರೆ ಶ್ರೀ ಹರಿಯು ಚೇತನರಿಗೆ

ಚೇತನನು. ನಾಮವು ಶಬ್ದರೂಪವಾಗಿರುವುದರಿಂದ ಅದು ಜಡವು. ಜಡಕ್ಕೆ ಜ್ಞಾನವೇ ಇಲ್ಲದಿರುವುದರಿಂದ ಜಡವಾದ ನಾಮವು ಯಾವ ಉಪಕಾರವನ್ನೂ ಮಾಡಲಾರದು. ಪರಮಾತ್ಮನ ನಾಮವು ಜಡವಾದ್ದರಿಂದ ಅದೇ ಪರಮಾತ್ಮನಲ್ಲ, ಭಿನ್ನ. ಹಾಗಾದರೆ ಹರಿಯ ನಾಮವನ್ನು ಉಚ್ಚರಿಸಿದರೆ ಸುಖವಾಗುವುದೆಂದು ಜಗತ್ತಿನಲ್ಲಿ ಪ್ರಸಿದ್ಧವಿದೆಯಲ್ಲ ಎಂದು ಕೇಳಬಹುದು. ಶಾಸ್ತ್ರವು ಹೇಳುತ್ತದೆ – ''ಅಭಕ್ತ್ಯೋದಾಹೃತಂ ನೈವ ಫಲದಾತೃ ಭವಿಷ್ಯತಿ'' – ಭಕ್ತಿಯಿಲ್ಲದೆ ಮಾಡುವ ಹರಿನಾಮ ಸಂಕೀರ್ತನವು ಫಲದಾಯಕವಲ್ಲವೇ ಅಲ್ಲ. ಆದರೆ ''ಸ್ನೇಹೋ ಭಕ್ತಿರಿತಿಪ್ರೋಕ್ತಾ ತಯಾ ಮುಕ್ತಿರ್ನಚಾನ್ಯಥಾ''. ಶ್ರೀ ಹರಿಯ ಮಹಿಮಾಜ್ಞಾನವೇ ಅತೀಂದ್ರಿಯನಾದ ಶ್ರೀ ಹರಿಯಲ್ಲಿ ಭಕ್ತಿಯನ್ನುಂಟು ಮಾಡುವುದು ಭಕ್ತಿಪೂರ್ವಕ ವಾದ ನಾಮಸಂಕೀರ್ತನೆ.

ಧ್ಯಾನವೇ ಮಹಾಫಲವಾದ ಮುಕ್ತಿಯನ್ನು ಕೊಡುವುದು. ಈ ಭಕ್ತಿಯಿಲ್ಲದ ನಾಮವನ್ನು ನುಡಿದರೆ ಯಾವ ಫಲವೂ ಇಲ್ಲ. ಆದುದರಿಂದ ಜ್ಞಾನ ಪ್ರದಾಯಕನೂ ಪ್ರೇರಕನೂ ಆದ ಭಗವಂತನ ಮಹಿಮಾ ಸಹಿತನಾಗಿ, ಪ್ರೇಮದಿಂದ ಅವನ ನಾಮೋಚ್ಚಾರಣೆಯೇ ಫಲದಾಯಕವೆಂದು ಸಕಲ ಶಾಸ್ತ್ರಗಳ ತಾತ್ಪರ್ಯ. ಈ ದೇವರ ನಾಮದ ಏಳು ನುಡಿಗಳಲ್ಲಿಯೂ, ವಾಲ್ಮೀಕಿ ಅಜಾಮಿಳ, ಪ್ರಹ್ಲಾದ, ಪರೀಕ್ಷಿತ್, ಗಜೇಂದ್ರ, ದ್ರೌಪದಿ ಮತ್ತು ಧ್ರುವರಾಜನೆಂಬ ಏಳು ಮಂದಿ ಭಕ್ತರನ್ನು ಶ್ರೀ ಪುರಂದರ ದಾಸರು ಹೆಸರಿಸಿದ್ದಾರೆ. ಈ ಏಳು ಮಂದಿಯೂ ಭಕ್ತಿಯಿಂದ ಶ್ರೀಹರಿಯನ್ನು ಸ್ಮರಿಸಿ ಫಲವನ್ನು ಹೊಂದಿದವರೆಂದು ಶ್ರೀದಾಸರು ದೃಷ್ಟಾಂತ ರೂಪವಾಗಿ ಹೇಳಬೇಕಾದರೆ ಭಕ್ತಿಯಿಲ್ಲದೆ ಹರಿಯ ಯಾವ ಋಣಕ್ಕೂ ಭಾಗಿಯಾಗದೆ ಅವನಿಂದ ಭಿನ್ನವಾದ ಹರಿನಾಮ ಸಂಕೀರ್ತನೆಯನ್ನು ಮೇಲ್ಕಂಡ ಏಳು ಮಂದಿ ಮಾಡಿದರೆಂಬ ಮಾತನ್ನು ಶ್ರೀ ದಾಸರಾಯರು ಎಂದಿಗೂ ಒಪ್ಪತಕ್ಕವರಲ್ಲ. ಶ್ರೀದಾಸರು ನಿಂದಾರೂಪವಾಗಿ ಹೇಳಬೇಕಾಗಿರುವುದರಿಂದ ದಾರ್ಷ್ಟಾಂತಿಕದಲ್ಲಿ ಹರಿಗೂ ನಾಮಕ್ಕೂ ಸಂಬಂಧವಿಲ್ಲವೆಂದು ಹೇಳಿ, ಆ ಸಂಬಂಧವಿರುವುದನ್ನು ದಾರ್ಷ್ಟಾಂತಿಕದಲ್ಲಿ ಹೇಳಿ ಶಾಸ್ತ್ರದ ಮರ್ಯಾದೆಯನ್ನು ತಿಳಿಸಿರುವರು.

''ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೊ'' ಎಂಬುದರ ಶಾಸ್ತ್ರ ಸಹಿತವಾದ ಅರ್ಥವೇನೆಂದರೆ: –

ನೀನು ಯಾಕೊ = ಏತಕ್ಕೆ ಬೇಕೆಂದರೆ ನಿನ್ನ ಹಂಗು ಯಾಕೆ = ಏಕೆ ಬೇಕೆಂದರೆ, ನಿನ್ನ ನಾಮದ ಬಲ = ಸಕಲವೇದಾದಿ ಶಾಸ್ತ್ರಗಳಲ್ಲಿಯೂ

ಪ್ರಸಿದ್ಧನಾಗಿರುವ ಮಹಿಮೆಯು ಒಂದಿದ್ದರೆ ಪ್ರಸನ್ನನಾಗಿ ನೀನು ಅನುಗ್ರಹಿಸಿದರೆ, ಸಾಕೊ = ಸಾಕು ಅಥವಾ ರಕ್ಷಿಸಬೇಕು. - ಎಂದು ಅರ್ಥ.

**ನುಡಿಗಳ ಅರ್ಥ:** ಮೊದಲನೆಯ ನುಡಿ – ಆ ಮರ ಈ ಮರವೆನ್ನುತ್ತಿರೆ = ರಾಮ ಶಬ್ದವನ್ನು ತಲೆಕೆಳಗು ಮಾಡಿದರೆ 'ಮರಾ' ಎಂದಾಗುವುದು. ಒಬ್ಬ ಕಿರಾತನು ತೀರ್ಥಯಾತ್ರೆ ಮಾಡುತ್ತಾ ಇದ್ದ ಶಂಖನೆಂಬ ಬ್ರಾಹ್ಮಣನ ಪಾದರಕ್ಷೆಗಳನ್ನು ಕಿತ್ತುಕೊಂಡನು. ಬೇಸಿಗೆ ಕಾಲ, ಅವನ ಪಾದಗಳಲ್ಲಿ ಬೊಬ್ಬೆ ಬಂದುವು. ''ಹಾಹಾ'' ಎಂದು ಕಿರಿಚಿದನು. ಆ ವ್ಯಾಧನು ಉದ್ಧಾರವಾಗುವ ವೇಳೆ ಅದಾದ್ದರಿಂದ ಮನಸ್ಸು ಕರಗಿ ಕಿತ್ತುಕೊಂಡಿದ್ದ ಪಾದರಕ್ಷೆಗಳನ್ನು ಹಿಂದಕ್ಕೆ ಕೊಟ್ಟನು. ಸತ್ಸಂಗದ ಪ್ರಭಾವ. ಅವನು ಉಪದೇಶಿಸಬೇಕೆಂದು ಬೇಡಿಕೊಂಡನು. ಬೇಡಿದವನು ಹಿಂದೆ ಬ್ರಾಹ್ಮಣನಾಗಿದ್ದು, ಪಾಪಕರ್ಮದಿಂದ ಈಗ ಬೇಡರ ಜಾತಿಯಲ್ಲಿ ಹುಟ್ಟಿದ್ದನು. ಇದನ್ನು ತಿಳಿದ ಶಂಖ ಬ್ರಾಹ್ಮಣನು ಅವನಿಗೆ ಮಂತ್ರೋಪದೇಶ ಮಾಡಬೇಕೆನಿಸಿತು. ಆದರೆ ಈ ಬೇಡನಿಗೆ ಮಂತ್ರವನ್ನು ಸರಿಯಾಗಿ ಹೇಳುವುದಿಲ್ಲ. ಅದಕ್ಕಾಗಿ **ಶ್ಲೋಕ:** ''ಏಕಾಗ್ರ ಮನಸಾತ್ರೈವ ಮಕ್ರೇತಿ ಜಪ ಸರ್ವದಾ'' ಒಂದೇ ಮನಸ್ಸಿನಿಂದ ಯಾವಾಗಲೂ 'ಮರಾ' ಎಂದರೆ ರಾಮ ಎಂದು ಜಪಿಸೆಂದನು. ಹೀಗೆ ರಾಮಮಂತ್ರವನ್ನು ಬೇಡರವನಿಗೆ ಉಪದೇಶಿಸುವ ಕ್ರಮವು 'ಮರಾ' ಎಂದಿರುವುದರಿಂದ ದಾಸರು ''ಆಮರ ಈಮರ'' ಎಂದು ಹೇಳಿರುವರು. ಈ ವಿಷಯದಲ್ಲಿ ಸಂಶಯವಿದ್ದವರು ಸ್ಕಾಂದಪುರಾಣಾಂತರ್ಗ ವೈಶಾಖ ಮಾಸ ಮಹಾತ್ಮೆಯನ್ನು ನೋಡಬಹುದು.

ಎರಡನೆಯ ನುಡಿಯಲ್ಲಿ ಅಜಮಿಳನು ನಾರಾಯಣನೆನ್ನದೆ ನಾರಗನೆಂದು ಮುಕ್ತನಾದನೆಂದು ದಾಸರು ಹೇಳಿರುವರು. ಅಜಮಿಳನು ಕಡೆಯ ಮಗನ ಹೆಸರು ನಾರಾಯಣನೆಂದು. ಪ್ರೀತಿಯಿಂದ 'ನಾರಗ'ನೆನ್ನುತ್ತಿದ್ದನು. ಅಜಮಿಳನಿಗೆ ಈ ಸಂಕೇತದ ಹೆಸರು ಸ್ಮರಣೆಗೆ ಬಂದಾಗ ವೈಕುಂಠನಾರಾಯಣನ ಜ್ಞಾಪಕ ಬಂದು ಅವನನ್ನೇ ಭಕ್ತಿಯಿಂದ ಸ್ಮರಣೆ ಮಾಡಿದನು.

**ಆಧಾರ:** ''ಅಜಾಮಿಲ್ಯೋಪಿ ಸ್ಮರಣಾದ್ಭಕ್ತ್ಯಾ ಮೃತ್ಯೋರ್ದ ಮುಚ್ಯಂತೆ'' ಎಂದು ಭಾಗವತದ ಆರನೆಯ ಸ್ಕಂದ 2ನೆಯ ಅಧ್ಯಾಯ, 14ನೇ ಶ್ಲೋಕದ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ಹೇಳಿರುವರು.

3ನೆಯ ನುಡಿಯಲ್ಲಿ ಪ್ರಹ್ಲಾದನು ಗೋವಿಂದನಾಮ ಸಂಕೀರ್ತನೆ ಮಾಡಿ ವಿಪತ್ತಿನಿಂದ ಪಾರಾದನೆಂದು ದಾಸರು ಹೇಳಿರುವರು. ಇದಕ್ಕೆ ಆಧಾರ ''ಗೋವಿಂದ ಪರಿರಂಭಿತಃ''

**ಶ್ಲೋಕ:** ಪರೇ ಬ್ರಹ್ಮಣೀ ಅನಿರ್ದೇಶ್ಯೇ ಭಗವತ್ಯಖಿಲಾತ್ಮನಿ ।
ಯುಕ್ತಾತ್ಮನ್ಯಫಲಾ ಆಪನ್ನ ಪುಣ್ಯಸ್ಯೇವ ತತ್ಕ್ರಿಯಾ ॥ [ಭಾಗ 7–5–41]

**ಅರ್ಥ:** ಅದೃಶ್ಯತ್ವಾದಿ ಗುಣಗಳುಳ್ಳವನೂ, ರಮಾಬ್ರಹ್ಮಾದಿ ಸಮಸ್ತರಿಗೂ ನಿಯಾಮಕನು, ಮಹಾಮಹಿಮೋಪೇತನೂ, ಸರ್ವೋತ್ತಮನೂ ಆದ ಶ್ರೀಹರಿಯಲ್ಲಿ ಏಕಾಗ್ರ ಮನಸ್ಸಿಟ್ಟಿದ್ದ ಆ ಪ್ರಹ್ಲಾದನ ವಿಷಯದಲ್ಲಿ ರಾಕ್ಷಸರು ಮಾಡಿದ ತಾಡನಾದಿ ವಧೋಪಾಯಗಳು ಪಾಪಿಯು ಸಂಪತ್ತನ್ನು ಸಂಪಾದಿಸಬೇಕೆಂದು ಮಾಡುವ ಮಹಾ ಉದ್ಯಮಗಳು ನಿಷ್ಫಲವಾಗುವಂತೆ ಆದವು. (ಇಲ್ಲಿ ಪ್ರಹ್ಲಾದನು ಹರಿಯಲ್ಲಿ ಏಕಾಗ್ರ ಮನಸಿಟ್ಟಿದ್ದನೆಂಬುದರಿಂದ ಹರಿಭಕ್ತಿ ಉಳ್ಳವನೆಂದು ಸ್ಪಷ್ಟವಾಗುವುದು.) ನಾಲ್ಕನೆಯ ನುಡಿಯಲ್ಲಿ, ಉತ್ತರೆಯ ಗರ್ಭವನ್ನು ರಕ್ಷಿಸಿದುದೂ, ಪರೀಕ್ಷಿತ್, ಉತ್ತರೆ ಮತ್ತು ಕುಂತಿ ಇವರ ಭಕ್ತಿಪೂರ್ವಕ ಪ್ರಾರ್ಥನೆಯಿಂದ ಎಂಬುದಕ್ಕೆ ಭಾಗವತ ಮೊದಲನೆಯ ಸ್ಕಂಧ, 81ನೇ ಅಧ್ಯಾಯ 18ನೆಯ ಶ್ಲೋಕವು ಆಧಾರ:

**ಶ್ಲೋಕ:** ಮಾಮಂಸ್ಥಾ ಹ್ಯೇತದಾಶ್ಚರ್ಯಂ ಸರ್ವಾಶ್ಚರ್ಯಮಯೇಽಚ್ಯುತೇ ।
ಯ ಇದಂ ಮಾಯಯಾ ದೇ ವ್ಯಾ ಸೃಜತ್ಯವತಿ ಹಂತ್ಯಜಃ ॥

**ಅರ್ಥ:** ಬ್ರಹ್ಮಾದಿ ಜಗತ್ತನ್ನು, ದೀಪ್ಯಮಾನದಿಂದ, ಇಚ್ಛೆಯಿಂದ, ಸೃಷ್ಟಿ ಸ್ಥಿತಿ ಸಂಹಾರ ಮಾಡುವ, ಸ್ವಯಂ ಹುಟ್ಟು ಸಾವಿಲ್ಲದ, ಎಲ್ಲ ವಿಧದ ಆಶ್ಚರ್ಯಗಳಿಗೂ ಆಶ್ರಯನಾದ, ಆಶ್ಚರ್ಯಸ್ವರೂಪಕನೇ ಆದ ಶ್ರೀಹರಿಯು ಪಾಂಡವರನ್ನು ಸಂಹರಿಸಲು ಬಂದ ಬ್ರಹ್ಮಾಸ್ತ್ರವನ್ನು ಶಾಂತಿ ಮಾಡಿದುದು ಮತ್ತು ಉತ್ತರಾದೇವಿಯ ಗರ್ಭದಲ್ಲಿದ್ದ ಪರೀಕ್ಷಿತ್ ರಾಜನನ್ನು ಕಾಪಾಡಿದುದು ಆಶ್ಚರ್ಯಕರವೆಂದು ತಿಳಿಯಬೇಡ. ಗಜೇಂದ್ರನು ಕೂಗಿದ್ದೂ ನಾರಾಯಣನನ್ನೇ. ''ನಾರಾಯಣ ಅಖಿಲ ಗುಣೋ ಭಗವನ್ನಮಸ್ತೇ''. ಅವನಿಗೇ ನಮಸ್ಕಾರವೆಂದನೇ ಹೊರತು, ಇನ್ನಾವ ನಾಮಕ್ಕೂ ಅಲ್ಲ. ಆದ್ದರಿಂದ ಗಜೇಂದ್ರನು ಹರಿಯನ್ನೇ ಸ್ಮರಿಸಿ ಉದ್ಧಾರವಾದನು.

ಏಳನೆಯ ನುಡಿಯಲ್ಲಿ ದ್ರೌಪದಿಯು ಕೃಷ್ಣನನ್ನೇ ಮೊರೆಹೊಕ್ಕಳೆಂದು ಭಾರತವು ''ಹಾ ಕೃಷ್ಣ ದ್ವಾರಕಾವಾಸಿನ್'' ಎಂದು ಹೇಳುವುದನ್ನೇ ದಾಸರು ತಿಳಿಸಿರುವರು.

ಏಳನೆಯ ನುಡಿಯಲ್ಲಿ ಧ್ರುವರಾಜನಂತೂ ಎಲ್ಲವೂ ದೇವರ ವ್ಯಾಪಾರವೆಂದು ಸ್ತುತಿಸಿರುವನು.

**ಶ್ಲೋಕ:** ಯೋಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ ಸಂಜೀವಯತ್ಯ
ಖಿಳಶಕ್ತಿ ಧರಃ ಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತಚರಣ ಶ್ರವಣತ್ವಗಾದೀನ್ ಪ್ರಾಣಾನ್ನಮೋ ಭಗವತೇ
ಪುರುಷಾಯ ತುಭ್ಯಂ ॥

**ಅರ್ಥ:** ಶ್ರೀ ಹರೇ ! ನೀನು ಸ್ವಸಾಮರ್ಥ್ಯದಿಂದಲೇ ಇಂದ್ರಿಯಗಳ ಮತ್ತು ಅವುಗಳ ಅಭಿಮಾನಿಗಳ ಶಕ್ತಿಗಳನ್ನು ತೋರಿಸುತ್ತಿರುವೆ. ಒಳಗೆ ತೆಪ್ಪಗೆ ಬಿದ್ದಿರುವ ನನ್ನ ವಾಗಿಂದ್ರಿಯ ಮತ್ತು ವೈಖರಿ ಎಂಬ ಮಾತನ್ನು ನೀನು ಜಾಗ್ರತಗೊಳಿಸಿದೆ. ಕೈ, ಕಾಲು, ಕಿವಿ, ತ್ವಗಾದಿ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳ ಕಡೆಗೆ ಹರಿಯುವಂತೆ ಮಾಡುವೆ ಮತ್ತು ಪ್ರಾರ್ಥಿತನಾಗಿ ಇಂದ್ರಿಯಗಳೆಲ್ಲವೂ ನಿನ್ನ ಕಡೆಗೆ ಪ್ರವಹಿಸುವಂತೆ ಮಾಡತಕ್ಕ, ಸರ್ವಸಿರಿಸಂಪನ್ನನೂ, ನಿಲಯಾ ರೂಪನೂ ಆದ ನಿನಗೆ ನಮಸ್ಕಾರ.

ಈ ಸ್ತೋತ್ರವು ಜೀವರೆಲ್ಲರೂ ಶ್ರೀಹರಿಯ ಕರುಣೆಗೆ ಪಾತ್ರರು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿದೆ. ಹೀಗೆ ಸರ್ವಜ್ಞಾನಿಗಳ ಅಭಿಪ್ರಾಯವೂ ಹೀಗಿರುವುದರಿಂದ ಶ್ರೀದಾಸರಾಯರು ಜ್ಞಾನಿಗಳಾಗಿ "ನೀನೂ ಬೇಡ, ನಿನ್ನ ಹಂಗೂ ಬೇಡ" ಎಂದು ಹೇಳುವರೆ ? ಅಯೋಗ್ಯರಿಗೆ ಮೋದವುಂಟಾಗಲು ಹೀಗೆ ಹೇಳಿರುವರೆಂದು ತಿಳಿಯಬೇಕು. ಹೀಗೆ ಎಲ್ಲರಿಗೂ ದೊರೆಯಲಿ ಎಂದು ಹೊರಡದೆ ದೇವರ ನಾಮಗಳು ಯೋಗ್ಯರಿಗೆ ಮಾತ್ರ ದೊರೆಯಲೆಂದೇ ಸರ್ವ ದಾಸರ ಅಭಿಪ್ರಾಯ.

ಮೂರು ವರುಷದಿಂದ ಈ ದೇವರುಗಳಿಂದ ರಾಕ್ಷಸರನ್ನು ತಿಳಿಯಲು ಯತ್ನಿಸುತ್ತಿದ್ದೇನೆ. ಹರಿಭಕ್ತರು ಇದನ್ನು ಗಮನವಿಟ್ಟು ತಿಳಿದು ಶ್ರೀಹರಿಯ ಮಹಿಮೆಯ ಜ್ಞಾನವನ್ನು ಹೊಂದಿ ಮಂಗಳವನ್ನು ಪಡೆದರೆ ನನಗೆ ಬಹಳ ತೃಪ್ತಿಯಾಗುವುದು.

### "ನೀನ್ಯಾಕೊ ನಿನ್ನ ಹಂಗ್ಯಾಕೋ" ಎಂಬ ಪದದ ಇನ್ನೊಂದು ನೋಟ.

"ಭಕ್ತಿ ಸ್ತ್ವೇಕಾ ವಿಮುಕ್ತಯೇ" – ಮುಕ್ತಿಯನ್ನು ಪಡೆಯುವುದಕ್ಕೆ ಮುಖ್ಯವಾಗಿ ಭಕ್ತಿಯೇ ಬೇಕು ಎಂದು ಶಾಸ್ತ್ರವು ಹೇಳುತ್ತದೆ. ಇದರ ಮೇಲೆ "ಅಹಂ ಸ್ವತಂತ್ರೋಪಿ ಭಕ್ತ ಪರಾಧೀನಃ" – ನಾನು ಸ್ವತಂತ್ರನಾಗಿದ್ದರೂ ಭಕ್ತರಿಗೆ

ಅಧೀನನಾಗಿರುವೆನು ಎಂದು ಶ್ರೀಮದ್‌ಭಾಗವತವು ಹೇಳುತ್ತದೆ. ದೇವತೆಯಾಗಲೀ, ಮುಕ್ತಿಗೆ ಅರ್ಹನಾದ ಮಾನವನಾಗಲೀ ಶ್ರೀಹರಿಯಲ್ಲಿ ಸ್ವಾಭಾವಿಕವಾಗಿ ಅವನಲ್ಲಿರುವ ಭಕ್ತಿಯನ್ನು ಮಾಡುವನು. ಅವನ ಯೋಗ್ಯತೆಯು ಪೂರ್ಣವಾಗಿರುವಷ್ಟು ಭಕ್ತಿಯನ್ನು ಅವನು ಮಾಡಿದಾಗ ಶ್ರೀಹರಿಯು ನನ್ನನ್ನು ಕೈಬಿಡದೆ ಮುಕ್ತಿಯನ್ನು ಕೊಡುವನು. ಅದಕ್ಕೆ ಮುಂಚೆ ಕರ್ಮಕ್ಕೆ ಅನುಸಾರವಾಗಿ ಯಾವ ದುಃಖವು ಬಂದರೂ ಅದನ್ನು ಶ್ರೀಹರಿಯು ಪರಿಹರಿಸುವನು. ಒಟ್ಟಿನಲ್ಲಿ ಶ್ರೀಹರಿಯು ಏನೇ ಬರಲಿ, ಭಕ್ತನಾದ ನನ್ನ ಒಂದು ರೋಮಕ್ಕೂ ಧಕ್ಕೆ ಬಾರದಂತೆ ರಕ್ಷಿಸುವನೆಂಬ ಅತ್ಯಂತ ದೃಢವಾದ ಜ್ಞಾನವು ಬರುವುದು. ಅಂತಹವನಿಗೆ ಅವನ ಕರ್ಮಾನುಸಾರ ಹರಿಯ ವಿರೋಧವು ಬಂದಾಗ ಹರಿಯಲ್ಲಿ ತನ್ನ ಭಕ್ತಿಯು ಅತ್ಯಂತ ದೃಢವಾಗಿರುವುದನ್ನು ಮನಗಂಡಿರುವುದರಿಂದ "ಹೇಗಿದ್ದರೂ ಹರಿಯು ನನ್ನನ್ನು ಏನೂ ಮಾಡಲಾರ"ನೆಂಬ ದೃಢನಂಬಿಕೆಯಿಂದ "ಹರಿಯೇ ನೀನು ನನ್ನನ್ನು ಏನು ಬೇಕಾದರೂ ಶಿಕ್ಷಿಸು, ನಾನು ಹೆದರುವುದಿಲ್ಲ." ನೀನು ಮೋಕ್ಷವನ್ನು ಕೂಡ ಕೊಡಬೇಕಾದ್ದಲ್ಲ, ಒಟ್ಟಿನಲ್ಲಿ ನಿನ್ನಿಂದ ನನಗೇನೂ ಆಗಬೇಕಾದ್ದಿಲ್ಲ. "ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮವನ್ನು ಬಲವಾಗಿ ನಂಬಿರುವೆನು" ಎಂಬ ಈ ಧೋರಣೆಯ ಮಾತಾಡುವನು. ಇದಕ್ಕೆ ದೃಷ್ಟಾಂತವಾಗಿ ಕುರುಕ್ಷೇತ್ರದಲ್ಲಿ ಭೀಷ್ಮರು ಕೃಷ್ಣಾರ್ಜುನರ ಮೇಲೆ ಬಾಣಗಳನ್ನು ಬಿಟ್ಟರು. ಆಗ ಶ್ರೀಕೃಷ್ಣನು ಕುಪಿತನಾದವನಂತೆ ತೋರುತ್ತ ಚಕ್ರದಿಂದ ಭೀಷ್ಮನನ್ನು ಕೊಂದುಬಿಡುವನೋ ಅನ್ನುವ ಹಾಗೆ ರಥದಿಂದ ಧುಮುಕಿ ಬಂದನು. ಅರ್ಜುನನು ಭೀತನಾಗಿ ಭೀಷ್ಮರನ್ನು ಕೊಲ್ಲದಿರೆಂದು ಅವನ ಕಾಲಿಗೆರಗಿದನು. ಇದೆಲ್ಲವನ್ನೂ ನೋಡಿ ಆಗ ಭೀಷ್ಮನು ಹೀಗೆ ಹೇಳುವನು – ಇದು ಕುಮಾರವ್ಯಾಸ ಭಾರತ, ಭೀಷ್ಮಪರ್ವ, 6ನೇ ಸಂಧಿಯಲ್ಲಿದೆ:

ದೇವ ನೀ ದೀನ ಕೊಲುವಡೆಯು ನಾ
ಸಾವೆನೇ ತಾನಾವನೆಂಬುದ
ದೇವರರಿಯರಲೈ ವೃಥಾ ಸಂಭಿನ್ನರೋಷದಲಿ
ದೇವನಾಮದ ಜೋಡು ನಮ್ಮನು
ಕಾವುದೈ ನೀ ಮುನಿದಡೆಯು ನಿಮ
ಗಾವು ಹೆದರೆವು ನಾಮಧಾರಿಗಳ ತುಳ ಬಲರೆ.

ಈ ಪದ್ಯದಲ್ಲಿ ದೇವನಾಮದ ಜೋಡು, ಅಂದರೆ ಕವಚ ನಮ್ಮನ್ನು ಕಾವುದೈ. ನಾಮಧಾರಿಗಳು ಅತುಳ ಬಲರು. ಈ ಮಾತುಗಳ ತಾತ್ಪರ್ಯವೇ "ನೀನ್ಯಾಕೋ ನಿನ್ನ ಹಂಗ್ಯಾಕೋ, ನಾಮದ ಬಲವೊಂದಿದ್ದರೆ ಸಾಕೋ" ಎಂಬುವು.

ಒಟ್ಟಿನಲ್ಲಿ ಇಂತಹ ಮಾತುಗಳು ಲೋಕದಲ್ಲಿ ಹರಿಗೂ ನೈಜ ಭಕ್ತರಿಗೂ ವಿರೋಧ ಬಂದಂತೆ ತೋರಿದಾಗ ಬರುವುವು. ಭಕ್ತಿಗೆ ಕೇಡಿಲ್ಲ ಎಂಬ ದೃಢ ನಂಬಿಕೆಯಿಂದ ಉಬ್ಬಾಯಿಸಿ ಆಡುವ ಈ ಮಾತುಗಳ ಶೈಲಿಯು ಶಾಸ್ತ್ರ ಸಂಮತಗಳೇ ಆಗಿವೆ ಎಂದು ತಿಳಿಯಬೇಕು.

ಲೋಕದಲ್ಲಿ ಎರಡು ಬಗೆಯ ಜನರಿದ್ದಾರೆ. ಅವರು ಮಾತ್ರವೇ "ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕು" ಎಂಬ ಮಾತನ್ನು ಆಡುವರೆಂದು ಶ್ರೀ ದಾಸರಾಯರ ಅಭಿಪ್ರಾಯ. ಎರಡು ಬಗೆಯ ಜನರೆಂದರೆ: ಏಕಾಂತ ಭಕ್ತರು – ಅವರು ಏನೇ ಬರಲಿ ಶ್ರೀಹರಿಯು ತಮ್ಮನ್ನು ಕೈಬಿಡದೆ ಕಾಪಾಡಿಯೇ ತೀರುತ್ತಾನೆಂದು ದೃಢ ವಿಶ್ವಾಸವುಳ್ಳವರು. ಇನ್ನೊಂದು ಬಗೆಯ ಜೀವರಾರೆಂದರೆ: – ಅವರಿಗಿನ್ನೂ ದೃಢಭಕ್ತಿಯು ಬಂದಿರುವುದಿಲ್ಲ. ಸಾತ್ವಿಕರಾಗಿರುವುದರಿಂದ 'ರಾಮ, ಕೃಷ್ಣ, ಗೋವಿಂದ' ಎಂದು ಹರಿಯ ನಾಮಗಳನ್ನುಚ್ಚರಿಸುತ್ತಿರುವರು. ಒಟ್ಟಿನಲ್ಲಿ, ನಾಸ್ತಿಕರು ಎಂದೂ ಈ ರೀತಿ ಮಾತಾಡುವುದಿಲ್ಲ. ಆಡುವವರೆಲ್ಲರೂ ಆಸ್ತಿಕರೇ ಸರಿ.

॥ ಶ್ರೀ ಕೃಷ್ಣಾರ್ಪಣಮಸ್ತು ॥

# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರು

೧. ಪಂ ॥ ಆರ್. ವಿ. ಶೇಷಾದ್ರಿಗವಾಯಿ ಅಧ್ಯಕ್ಷರು
೨. ದುರ್ಗಾ ಸಿ. ಆವರ್ತಿ *(ರಿಜಿಸ್ಟ್ರಾರ್)*
೩. ಬಿ. ಎನ್ ಭದ್ರಪ್ಪ *(ಅರ್ಥ ಸದಸ್ಯರು)*
೪. ಶ್ರೀ ಕೆ. ಎಸ್. ಹಡಪದ್
೫. ಶ್ರೀ ಎ. ಜೆ. ನಾರಾಯಣಗೌಡ
೬. ಶ್ರೀ ಜಿ. ಶ್ರೀರಾಮಲು ರಾಯಚೂರ್‌ಕರ್
೭. ಶ್ರೀ ಎನ್. ಆರ್. ಜ್ಞಾನಮೂರ್ತಿ
೮. ಶ್ರೀ ಕಾಂಚನ ವಿ. ಸುಬ್ಬರತ್ನಂ
೯. ಶ್ರೀ ಬಿ. ನಾರಾಯಣಪ್ಪ
೧೦. ಶ್ರೀ ಎ. ವೀರಭದ್ರಯ್ಯ
೧೧. ಶ್ರೀ ಎಂ. ಭಾರದ್ವಾಜ್
೧೨. ಶ್ರೀ ಹೆಚ್. ಪಿ. ರಾಮಾಚಾರ್
೧೩. ಶ್ರೀ ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ
೧೪. ಶ್ರೀ ಹೆಚ್. ಎನ್. ನಾರಾಯಣಪ್ಪ
೧೫. ಶ್ರೀ ಎಂ. ವೆಂಕಟೇಶ ಕುಮಾರ್
೧೬. ಶ್ರೀ ಸಂಜೀವ್ ಯು. ಪೋತದಾರ
೧೭. ಶ್ರೀ ಎಸ್. ಕೆ. ಲಕ್ಷ್ಮಿನಾರಾಯಣ (ಬಾಬು)
೧೮. ಶ್ರೀಮತಿ ಎಂ. ಶಕುಂತಲಾ
೧೯. ಶ್ರೀಮತಿ ಉಷಾ ಕಾಮತ್
೨೦. ಡಾ ॥ ಎಂ. ಸೂರ್ಯಪ್ರಸಾದ್
೨೧. ಶ್ರೀ ಹೆಚ್. ಕೆ. ನಾರಾಯಣ
೨೨. ಶ್ರೀ ಹೆಚ್. ಆರ್. ಕೇಶವಮೂರ್ತಿ
೨೩. ಶ್ರೀಮತಿ ನರ್ಮದ
೨೪. ಶ್ರೀಮತಿ ಸುರೇಖ
೨೫. ಶ್ರೀಮತಿ ನಾಗಮಣಿ ಶ್ರೀನಾಥ್
೨೬. ಶ್ರೀ ಶಿವಮೊಗ್ಗ ಸುಬ್ಬಣ್ಣ